Mobile Edition

Version 1.0

# ಇಸ್ಲಾಂ ಮತ್ತು ಮಾನವೀಯತೆ

ಸಿರಾಜುಲ್ ಇಸ್ಲಾಂ ಬಾಲುಶ್ಶೇರಿ

Manhaj-Al-Ambiya
MANGALURU
www.alambiya.com

ALL RIGHTS RESERVED © جميع الحقوق محفوظة

No part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the translator

**First Mobile Edition: July 2023**

Author:
**Sirajul Islam Balushery**

Translated by:
**Mohammad Hamza**

Book designed by:
**Image Media Solutions, Puttur**

*Publishers*
**Manhaj-Al-Ambiya**

Majestic Towers, 1st Floor, Pandeshwar,
MANGALURU

www.alambiya.com

# ವಿಷಯಸೂಚಿ


1. ಇಸ್ಲಾಂ ಮತ್ತು ಮಾನವೀಯತೆ .................. 4
2. ಅಲ್ಲಾಹು ಎಲ್ಲರ ಆರಾಧ್ಯ ದೇವನು ............ 8
3. ಜಾತಿಯ ಆಧಾರದಲ್ಲಿ ತಾರತಮ್ಯ ಮಾಡದವನು .......................................11
4. ಇಸ್ಲಾಂ ಮಾನವ ಸಹೋದರತೆಯ ಧರ್ಮ . 14
5. ದೇಶವು ಮನುಷ್ಯನನ್ನು ಸುಧಾರಿಸುತ್ತದೆಯೇ? ........................................................ 17
6. ದೈವಿಕ ಮಾರ್ಗದರ್ಶನ ಮತ್ತು ಮಾನವ ವಿಮೋಚನೆ ........................................ 23
7. ಮನುಷ್ಯನನ್ನು ಗುರಿಯಿಲ್ಲದೆ ಸೃಷ್ಟಿಸಲಾಗಿದೆಯೇ? ............................. 27
8. ಸೃಷ್ಟಿಕರ್ತ ಮಾತ್ರ ಮಾರ್ಗದರ್ಶನ ನೀಡಬಲ್ಲ ........................................................ 32
9. ಸಾವಿನ ನಂತರ ಜೀವನವಿದೆ - ಖಂಡಿತ..... 38
10. ಇಸ್ಲಾಂ ಒಳಿತು ಮತ್ತು ಶಾಂತಿಯ ಧರ್ಮವಾಗಿದೆ..................................... 41


ನೇರವಾಗಿ ವಿಷಯಕ್ಕೆ ಧುಮುಕಲು ಶೀರ್ಷಿಕೆಯನ್ನು ಸ್ಪರ್ಶಿಸಿ

# ಇಸ್ಲಾಂ ಮತ್ತು ಮಾನವೀಯತೆ

“ಓ ಮನುಷ್ಯರೇ! ಖಂಡಿತವಾಗಿಯೂ ನಾವು ನಿಮ್ಮನ್ನು ಒಂದು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದ್ದೇವೆ. ನೀವು ಪರಸ್ಪರ ಗುರುತಿಸುವು-ದಕ್ಕಾಗಿ ನಾವು ನಿಮ್ಮನ್ನು ವಿವಿಧ ಸಮುದಾಯ ಮತ್ತು ಜನಾಂಗಗಳನ್ನಾಗಿ ಮಾಡಿದ್ದೇವೆ. ನಿಶ್ಚಯವಾಗಿಯೂ ನಿಮ್ಮ ಪೈಕಿ ಅತಿಹೆಚ್ಚು ಭಯಭಕ್ತಿಯುಳ್ಳವನು ಯಾರೋ ಅವನೇ ಅಲ್ಲಾಹನ ಬಳಿ ನಿಮ್ಮ ಪೈಕಿ ಅತ್ಯಂತ ಗೌರವಾನ್ವಿತನು. ನಿಶ್ಚಯವಾಗಿಯೂ ಅಲ್ಲಾಹು ಸರ್ವಜ್ಞನೂ ಸೂಕ್ಷ್ಮಜ್ಞಾನಿಯೂ ಆಗಿದ್ದಾನೆ.” [ಕುರ್‌ಆನ್ 49:13]

ಇದು ಮಾನವೀಯತೆ ಮತ್ತು ಮಾನವ ಸಂಸ್ಕೃತಿಗೆ ಸಂಬಂಧಿಸಿದಂತೆ ಪವಿತ್ರ ಕುರ್‌ಆನ್ ಮಾನವಕುಲದ ಮುಂದಿಡುವ ಆಶಯವಾಗಿದೆ. ಮನುಷ್ಯರೆಲ್ಲರೂ ಒಬ್ಬನೇ ದೇವನ ಸೃಷ್ಟಿಗಳು ಮತ್ತು ಒಬ್ಬರೇ ಮಾತಾಪಿತರ ಮಕ್ಕಳು. ಹಿಂದೂಗಳಿಗೆ ಬೇರೆ ದೇವರು, ಮುಸಲ್ಮಾನರಿಗೆ ಬೇರೆ ದೇವರು, ಕ್ರಿಶ್ಚಿಯನ್ನರಿಗೆ ಬೇರೆ ದೇವರು... ಅರಬ್ಬರಿಗೆ ಬೇರೆ ದೇವರು,

ಭಾರತೀಯರಿಗೆ ಬೇರೆ ದೇವರು, ಯೂರೋಪಿಯನ್ನರಿಗೆ ಬೇರೆ ದೇವರು... ಹೀಗಲ್ಲ. ಕರಿಯರಿಗೆ ಮತ್ತು ಬಿಳಿಯರಿಗೆ ಬೇರೆ ಬೇರೆ ದೇವರುಗಳಿಲ್ಲ. ಹಿಂದಿ ಮಾತನಾಡುವವರಿಗೆ ಮತ್ತು ಅರಬ್ಬಿ ಮಾತನಾಡುವವರಿಗೆ ಬೇರೆ ಬೇರೆ ದೇವರುಗಳಿಲ್ಲ. ಹಿಂದೂ, ಕ್ರಿಶ್ಚಿಯನ್ ಮತ್ತು ಮುಸ್ಲಿಮರಿಗೆ ಒಂದೇ ಸೂರ್ಯನಿದ್ದರೆ, ಅವರು ಕುಡಿಯುವ ನೀರು ಒಂದೇ ಆಗಿದ್ದರೆ, ಅವರು ಉಸಿರಾಡುವ ಗಾಳಿ ಒಂದೇ ಆಗಿದ್ದರೆ, ಅವರೆಲ್ಲರೂ ಒಬ್ಬನೇ ದೇವನ ಸೃಷ್ಟಿಗಳು. ದೇವರ ಹೆಸರಿನಲ್ಲಿ ಪರಸ್ಪರ ಕಚ್ಚಾಡಬೇಕಾದ ಅಗತ್ಯವಿಲ್ಲದ ರೀತಿಯಲ್ಲಿ ಎಲ್ಲರೂ ಒಪ್ಪಬಹುದಾದ ಏಕದೇವನಾದ ಅಲ್ಲಾಹನನ್ನು ಇಸ್ಲಾಂ ಧರ್ಮವು ಪರಿಚಯಿಸುತ್ತದೆ.

ಮುಸಲ್ಮಾನರು ಹಿಂದೂಗಳ ದೇವರನ್ನು ಪೂಜಿಸಲು ಸಿದ್ಧರಾಗದೇ ಇರಬಹುದು. ಮುಸ್ಲಿಮರಿಗೆ ಸೀಮಿತವಾಗಿರುವ ದೇವರನ್ನು ಪೂಜಿಸಲು ಹಿಂದೂಗಳು ಸಿದ್ಧರಾಗಲಾರರು. ಇವರಿಬ್ಬರ ದೇವರನ್ನು ಆರಾಧಿಸಲು ಕ್ರೈಸ್ತರು ಮುಂದೆ ಬರಲಾರರು. ಆದರೆ, ತಮ್ಮನ್ನು ಸೃಷ್ಟಿಸಿದ ದೇವನನ್ನು ಪೂಜಿಸಲು ಯಾರಿಗೂ ತೊಂದರೆ

ಇರಲಾರದು. ನಾನೇಕೆ ಬೇರೆಯವರ ದೇವರನ್ನು ಪೂಜಿಸಬೇಕು ಎಂಬ ಇಗೋ ಸಮಸ್ಯೆ ಕಾಡದ ರೀತಿಯಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವ ಮತ್ತು ಎಲ್ಲರಿಗೂ ದೇವನಾಗಿರುವ ಒಬ್ಬನೇ ದೇವನನ್ನು ಆರಾಧಿಸಲು ಇಸ್ಲಾಂ ಧರ್ಮವು ಕರೆ ನೀಡುತ್ತದೆ...

"ಓ ಮನುಷ್ಯರೇ! ನೀವು ನಿಮ್ಮನ್ನು ಮತ್ತು ನಿಮ್ಮ ಪೂರ್ವಜರನ್ನು ಸೃಷ್ಟಿಸಿದ ನಿಮ್ಮ ಪ್ರಭುವನ್ನು ಆರಾಧಿಸಿರಿ. ನೀವು ಭಯಭಕ್ತಿಯಿಂದ ಜೀವಿ-ಸುವುದಕ್ಕಾಗಿ. ನಿಮಗೋಸ್ಕರ ಭೂಮಿಯನ್ನು ಹಾಸನ್ನಾಗಿ ಮತ್ತು ಆಕಾಶವನ್ನು ಮೇಲ್ಛಾವಣಿಯ-ನ್ನಾಗಿ ಮಾಡಿಕೊಟ್ಟಿರುವ, ಹಾಗೂ ಆಕಾಶದಿಂದ ನೀರನ್ನು ಇಳಿಸಿ ತನ್ಮೂಲಕ ನಿಮಗೆ ಭಕ್ಷ್ಯಯೋಗ್ಯ ಫಲಗಳನ್ನು ಉತ್ಪಾದಿಸಿಕೊಟ್ಟಿರುವ (ಪ್ರಭುವನ್ನು ಆರಾಧಿಸಿರಿ). ಆದ್ದರಿಂದ (ಇವೆಲ್ಲವನ್ನೂ) ತಿಳಿದವ-ರಾಗಿದ್ದೂ ನೀವು ಅಲ್ಲಾಹನಿಗೆ ಸರಿಸಮಾನರನ್ನು ನಿಶ್ಚಯಿಸಬೇಡಿ." [ಕುರ್‌ಆನ್ 2:21-22]

"(ಓ ಪ್ರವಾದಿಯವರೇ) ಕೇಳಿರಿ: ಆಕಾಶದಿಂದ ಮತ್ತು ಭೂಮಿಯಿಂದ ನಿಮಗೆ ಆಹಾರವನ್ನು ಒದಗಿಸುವವನು ಯಾರು? ಶ್ರವಣವನ್ನೂ ದೃಷ್ಟಿಯನ್ನೂ ಅಧೀನದಲ್ಲಿರಿಸಿದವನು ಯಾರು? ನಿರ್ಜೀವಿಯಿಂದ ಜೀವಿಯನ್ನು

ಮತ್ತು ಜೀವಿಯಿಂದ ನಿರ್ಜೀವಿಯನ್ನು ಹೊರತರುವವನು ಯಾರು? ಕಾರ್ಯನಿರ್ವಹಣೆ ಮಾಡುವವನು ಯಾರು? ಆಗ ಅವರು ಅಲ್ಲಾಹು ಎಂದು ಹೇಳುವರು. ಕೇಳಿರಿ: ಆದರೂ ನೀವೇಕೆ ಭಯಭಕ್ತಿಯಿಂದ ಜೀವಿಸುವುದಿಲ್ಲ? (ಇವೆಲ್ಲವನ್ನೂ ಮಾಡಿದವನೇ) ನಿಮ್ಮ ನೈಜ ಪ್ರಭುವಾದ ಅಲ್ಲಾಹು. ಹೀಗಿರುವಾಗ, ಸತ್ಯದಾಚೆಗೆ ದುರ್ಮಾರ್ಗವಲ್ಲದೆ ಇನ್ನೇನಿದೆ? ಹೀಗಿದ್ದೂ ನೀವು ಹೇಗೆ (ಸತ್ಯದಿಂದ) ತಪ್ಪಿಸಲ್ಪಡುತ್ತಿದ್ದೀರಿ?" [ಕುರ್‌ಆನ್ 10:31-32]

ಸಹೋದರರೇ....... ಈ ಕುರ್‌ಆನ್ ವಚನಗಳು ಸರ್ವಲೋಕಗಳ ಒಡೆಯನಾದ, ಎಲ್ಲರ ಆರಾಧ್ಯನಾದ ಅಲ್ಲಾಹನನ್ನು ಆರಾಧಿಸಲು ಕರೆ ನೀಡುತ್ತಿವೆ. ಕೆಲವರು ತಪ್ಪಾಗಿ ಅರ್ಥಮಾಡಿಕೊಂಡಂತೆ ಅಲ್ಲಾಹು ಎಂದರೆ ಪ್ರವಾದಿ ಮುಹಮ್ಮದ್(ಸ) ಪರಿಚಯಿಸಿದ ಮುಸ್ಲಿಮರು ಆರಾಧಿಸುವ ಅರಬ್ಬರ ಬುಡಕಟ್ಟು ದೇವರ ಹೆಸರಲ್ಲ.

ಸಹೋದರರೇ, ನಿಜಸ್ಥಿತಿ ಹಾಗಲ್ಲ...

ವಿಷಯಸೂಚಿ

# ಅಲ್ಲಾಹು ಎಲ್ಲರ ಆರಾಧ್ಯ ದೇವನು

ಅಲ್ಲಾಹು ಎಂಬುದು ಅರಬ್ಬಿ ಶಬ್ದ. ಅದನ್ನು ಸತ್ಯದೇವ ಅಥವಾ ನೈಜ ಆರಾಧ್ಯ ಎಂದು ಭಾಷಾಂತರಿಸಬಹುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅಲ್ಲಾಹು ಎಂದರೆ ಇಡೀ ಪ್ರಪಂಚದ ಸೃಷ್ಟಿಕರ್ತ, ಸಂರಕ್ಷಕ, ಅನ್ನದಾತ ಮತ್ತು ಎಲ್ಲಾ ಆರಾಧನೆಗಳ ನೈಜ ಹಕ್ಕುದಾರ.

ಕುರ್‌ಆನ್‌ನಲ್ಲಿ ಎಲ್ಲಿಯೂ ಅಲ್ಲಾಹು ಎಂದರೆ ಮುಸ್ಲಿಮರ ದೇವರು ಅಥವಾ ಅರಬ್ಬರು ಪೂಜಿಸುವ ದೇವರು ಎಂಬ ಯಾವುದೇ ಉಲ್ಲೇಖವನ್ನು ಕಾಣಲು ಸಾಧ್ಯವಿಲ್ಲ. ಬನ್ನಿ... ಅಲ್ಲಾಹು ತನ್ನನ್ನು ತಾನು ಪರಿಚಯಿಸಿಕೊಳ್ಳುವ ಕುರ್‌ಆನ್ ಶ್ಲೋಕಗಳ ಮೂಲಕ ಅವನ ಬಗ್ಗೆ ತಿಳಿಯೋಣ...

"ನಿಮ್ಮನ್ನು ಸೃಷ್ಟಿಸಿದವನು ಅಲ್ಲಾಹು. ನಂತರ ಅವನು ನಿಮಗೆ ಆಹಾರವನ್ನು ಒದಗಿಸಿದನು. ನಂತರ ಅವನು ನಿಮ್ಮನ್ನು ಮರಣಗೊಳಿ-ಸುವನು. ನಂತರ ಅವನು ನಿಮಗೆ ಜೀವವನ್ನು ನೀಡುವನು. ಇವುಗಳಲ್ಲಿ ಯಾವುದಾದರೂ ಒಂದನ್ನು ಮಾಡುವವರು ನಿಮ್ಮ ಸಹಭಾಗಿಗಳಲ್ಲಿ

(ದೇವರುಗಳಲ್ಲಿ) ಯಾರಾದರೂ ಇದ್ದಾರೆಯೇ? ಅವನು ಪರಮಪಾವನನು. ಅವರು ಅವನಿಗೆ ಸಹಭಾಗಿಗಳಾಗಿ ನಿಶ್ಚಯಿಸುವ ಎಲ್ಲಾ (ದೇವರುಗಳಿಂದಲೂ) ಅವನು ಎಷ್ಟೋ ಪರಿಶುದ್ಧನು ಮತ್ತು ಪರಮೋನ್ನತನಾಗಿದ್ದಾನೆ.” [ಕುರ್‌ಆನ್ 30:40]

“ರಾತ್ರಿಯನ್ನು ನಿಮಗೆ ವಿಶ್ರಾಂತಿ ಪಡೆಯುವ ಸಮಯವಾಗಿ ಮತ್ತು ಹಗಲನ್ನು ಪ್ರಕಾ-ಶಮಾನವಾಗಿ ಮಾಡಿದವನು ಅಲ್ಲಾಹು. ನಿಶ್ಚಯವಾಗಿಯೂ ಅಲ್ಲಾಹು ಮನುಷ್ಯರಿಗೆ ಅತ್ಯಧಿಕ ಅನುಗ್ರಹ ತೋರುವವನಾಗಿದ್ದಾನೆ. ಆದರೆ ಮನುಷ್ಯರಲ್ಲಿ ಹೆಚ್ಚಿನವರೂ ಅವನಿಗೆ ಕೃತಜ್ಞರಾಗಿ ಬದುಕುವುದಿಲ್ಲ. ಆ ಅಲ್ಲಾಹನೇ ನಿಮ್ಮ ಒಡೆಯ. ಅವನು ಸರ್ವ ವಸ್ತುಗಳ ಸೃಷ್ಟಿಕರ್ತ. ಅವನ ಹೊರತು ಆರಾಧನೆಗೆ ಅರ್ಹರಾದವರು ಯಾರೂ ಇಲ್ಲ. ಆದರೂ ನೀವು (ಸತ್ಯಮಾರ್ಗದಿಂದ) ತಪ್ಪಿಸಲ್ಪಡುತ್ತಿರು-ವುದು ಹೇಗೆ?” [ಕುರ್‌ಆನ್ 40:61-62]

“ನಿಮಗೋಸ್ಕರ ಭೂಮಿಯನ್ನು ವಾಸಯೋಗ್ಯ ಸ್ಥಳವಾಗಿ ಮತ್ತು ಆಕಾಶವನ್ನು ಛಾವಣಿಯಾಗಿ ಮಾಡಿಕೊಟ್ಟವನು ಅಲ್ಲಾಹು. ಅವನು

ನಿಮಗೆ ರೂಪವನ್ನು ನೀಡಿದನು, ಮತ್ತು ನಿಮ್ಮ ರೂಪಗಳನ್ನು ಉತ್ತಮಗೊಳಿಸಿದನು. ಅವನು ನಿಮಗೆ ಶುದ್ಧ ವಸ್ತುಗಳಿಂದ ಆಹಾರವನ್ನೂ ಒದಗಿಸಿದನು. ಅವನೇ ನಿಮ್ಮ ಒಡೆಯನಾದ ಅಲ್ಲಾಹು. ಆದ್ದರಿಂದ ಸರ್ವಲೋಕಗಳ ಒಡೆಯನಾದ ಅಲ್ಲಾಹು ಅನುಗ್ರಹಪೂರ್ಣ-ನಾಗಿದ್ದಾನೆ. ಅವನು (ಎಂದೆಂದಿಗೂ ಸಾಯದ) ನಿರಂತರ ಬದುಕಿರುವವನು. ಅವನ ಹೊರತು ಆರಾಧನೆಗೆ ಅರ್ಹರಾದವರು ಯಾರೂ ಇಲ್ಲ. ಆದ್ದರಿಂದ ಧರ್ಮವನ್ನು ಅವನಿಗೆ ನಿಷ್ಕಳಂಕ-ಗೊಳಿಸಿ ಅವನನ್ನು ಮಾತ್ರ ಕರೆದು ಪ್ರಾರ್ಥಿಸಿರಿ. ಸರ್ವಲೋಕಗಳ ಸಂರಕ್ಷಕನಾದ ಅಲ್ಲಾಹನಿಗೆ ಸರ್ವಸ್ತುತಿಗಳು.” [ಕುರ್‌ಆನ್ 40:64-65]

ಈ ಶ್ಲೋಕಗಳಲ್ಲಿ ಎಲ್ಲಿಯೂ ಅಲ್ಲಾಹು ಮುಸಲ್ಮಾನರ ದೇವರು ಅಥವಾ ಅರಬ್ಬರ ದೇವರು ಎಂದು ಹೇಳಿದ್ದು ಕಾಣಿಸುವುದಿಲ್ಲ. ಬದಲಿಗೆ, ಅವನು ಸರ್ವ ಮನುಕುಲದ ಸೃಷ್ಟಿಕರ್ತನು ಎಂದು ಹೇಳಿದ್ದು ಮಾತ್ರ ಕಾಣಿಸುತ್ತದೆ.

⇐ ವಿಷಯಸೂಚಿ

# ಜಾತಿಯ ಆಧಾರದಲ್ಲಿ ತಾರತಮ್ಯ ಮಾಡದವನು

ಎಲ್ಲಾ ಮಾನವರೂ ಅಲ್ಲಾಹನ ಸೃಷ್ಟಿಗಳಾಗಿದ್ದರೆ, ಮನುಷ್ಯರ ನಡುವೆ ಬೇಧಭಾವಗಳಿಗೆ ಆಸ್ಪದವಿಲ್ಲ. ಅರಬ್ಬರನ್ನು ಮತ್ತು ಭಾರತೀಯರನ್ನು ಸೃಷ್ಟಿಸಿದ್ದು ಒಬ್ಬನೇ ದೇವನಾಗಿದ್ದರೆ, ಬಿಳಿ ಚರ್ಮದ ಯುರೋಪಿಯನ್ನರನ್ನು ಮತ್ತು ಕಪ್ಪು ಚರ್ಮದ ಆಫ್ರಿಕನ್ನರನ್ನು ಸೃಷ್ಟಿಸಿದ್ದು ಅದೇ ಸೃಷ್ಟಿಕರ್ತನಾ-ಗಿದ್ದರೆ, ಭಾಷೆ, ರಾಷ್ಟ್ರೀಯತೆ ಅಥವಾ ಬಣ್ಣದ ಹೆಸರಿನಲ್ಲಿರುವ ಉಚ್ಛ-ನೀಚತೆಗೆ ಯಾವುದೇ ಬೆಲೆಯಿಲ್ಲ.

ಜಾತಿ, ಉಪಜಾತಿಗಳ ಹೆಸರಲ್ಲಿ; ಭಾಷೆ, ದೇಶ, ವರ್ಣ ಬೇಧಗಳ ಹೆಸರಲ್ಲಿ ಜಗತ್ತಿನಲ್ಲಿ ನಡೆದಿರುವ, ನಡೆಯುತ್ತಿರುವ ಅನ್ಯಾಯ, ಹಿಂಸೆ, ರಕ್ತಪಾತಗ-ಳಿಗೆ ಲೆಕ್ಕವೇ ಇಲ್ಲ.

ಇಡೀ ಭೂಮಿ ದೇವರ ಸೃಷ್ಟಿಯಾಗಿದೆ. ಮನುಷ್ಯರೂ ಅದರಲ್ಲಿ ಒಳಪಡುತ್ತಾರೆ. ಆದ್ದರಿಂದ, ಯಾವುದೇ ಒಂದು ದೇಶವಾಸಿಗ-ಳೊಡನೆ ಹೆಚ್ಚು ಪ್ರೀತಿ ಅಥವಾ ಹೆಚ್ಚು ದ್ವೇಷವನ್ನು ಹೊಂದಿರುವ, ತಾರತಮ್ಯ ಮಾಡುವ ದೇವನನ್ನು

ಇಸ್ಲಾಂ ಪರಿಚಯಿಸುವುದಿಲ್ಲ. ನಿಮ್ಮ ಸೃಷ್ಟಿಕರ್ತನಾದ ದೇವನು ಕಪ್ಪು ಮತ್ತು ಬಿಳಿಯರ ಬಗ್ಗೆ ವಿಭಿನ್ನ ನಿಲುವು ತೆಗೆದುಕೊಳ್ಳುವ ಅನ್ಯಾಯದ ದೇವನಲ್ಲ.... ಭಾಷೆಯ ಸೃಷ್ಟಿಕರ್ತನಾದ ಅಲ್ಲಾಹನಿಗೆ ಯಾವುದೇ ಒಂದು ನಿರ್ದಿಷ್ಟ ಭಾಷೆಯೊಂದಿಗೆ ಅಥವಾ ನಿರ್ದಿಷ್ಟ ಭಾಷೆಯನ್ನು ಮಾತನಾಡುವವರೊಂದಿಗೆ ವಿಶೇಷ ಪ್ರೀತಿ ಅಥವಾ ದ್ವೇಷವಿಲ್ಲ.

ಆದ್ದರಿಂದ, ಇಸ್ಲಾಂ ಮುಂದಿಡುವ ದೃಷ್ಟಿಕೋನವು ಸಂಪೂರ್ಣವಾಗಿ ಮಾನವೀಯವಾಗಿದೆ. ಯಾರಿಗೂ ಅವರ ಭಾಷೆ ಅಥವಾ ಬಣ್ಣದಿಂದಾಗಿ ಯಾವುದೇ ಶ್ರೇಷ್ಠತೆ ಇಲ್ಲ. ಯಾರೂ ಇನ್ನೊಬ್ಬರಿಗಿಂತ ಮೇಲು ಅಥವಾ ಕೀಳಲ್ಲ. ಭಾಷೆ, ಬಣ್ಣ ಮತ್ತು ದೇಶದ ವ್ಯತ್ಯಾಸವು ಪರಸ್ಪರ ಗುರುತಿಸುವ ಸಾಧನವಾಗಿದೆ. ಏಕೆಂದರೆ ಯಾರೂ ಕೂಡ ಹುಟ್ಟುವುದಕ್ಕೆ ಮೊದಲು ತನ್ನ ದೇಶ, ಭಾಷೆ, ನೆಲ ಮತ್ತು ಬಣ್ಣ ಏನಾಗಿರಬೇಕು ಎಂಬ ಬೇಡಿಕೆಯಿಟ್ಟು ಹುಟ್ಟುವುದಿಲ್ಲ. ಎಲ್ಲವೂ ದೈವಿಕ ನಿರ್ಣಯ. ನಮ್ಮ ಬಣ್ಣ, ಭಾಷೆ ಮತ್ತು ದೇಶವನ್ನು ನಿರ್ಧರಿಸಿದ್ದು ಸರ್ವಶಕ್ತನಾದ ಸೃಷ್ಟಿಕರ್ತನಾಗಿದ್ದಾನೆ. ಹೀಗಿರುವಾಗ, ಇವುಗಳ ಹೆಸರಲ್ಲಿ

ದುರಭಿಮಾನ ಪಡಲು ನಮಗೇನು ಹಕ್ಕಿದೆ?

ಆದ್ದರಿಂದ ಇಸ್ಲಾಂ ಹೇಳುತ್ತದೆ: “ಭಾಷೆ-ದೇಶ-ಬಣ್ಣದ ವ್ಯತ್ಯಾಸವು ಒಬ್ಬರನ್ನೊಬ್ಬರು ಗುರುತಿಸುವ ಮಾನದಂಡವಾಗಿದೆ. ಮನುಷ್ಯನ ಶ್ರೇಷ್ಠತೆಯು ಅವನ ಸಂಸ್ಕಾರದೊಂದಿಗೆ ಮಾತ್ರ ಸಂಬಂಧವನ್ನು ಹೊಂದಿದೆ.”

ವಿಷಯಸೂಚಿ

# ಇಸ್ಲಾಂ ಮಾನವ ಸಹೋದರತೆಯ ಧರ್ಮ

ಎಲ್ಲಾ ಮಾನವರು ಒಬ್ಬರೇ ತಂದೆ-ತಾಯಿಯ ಮಕ್ಕಳು; ಆದ್ದರಿಂದ ಅವರೆಲ್ಲರೂ ಸಹೋದರರು ಮತ್ತು ಸಹೋದರಿಯರು ಎಂಬುದು ಇಸ್ಲಾಮ್ ಮುಂದಿಡುವ ಇನ್ನೊಂದು ಆಶಯವಾಗಿದೆ. ಇಸ್ಲಾಂ ಕೀಳ್ಜಾತಿ ಮತ್ತು ಮೇಲ್ಜಾತಿಯೆಂಬ ಎಲ್ಲಾ ಬೇಧಭಾವಗಳನ್ನು ತಿರಸ್ಕರಿಸುತ್ತದೆ. ಮಾನವರೆಲ್ಲರೂ ಒಬ್ಬರೇ ತಂದೆ-ತಾಯಿಯ ಮಕ್ಕಳಾಗಿದ್ದರೆ, ಮತ್ತು ಎಲ್ಲರೂ ಒಂದೇ ಕುಟುಂಬದ ಸದಸ್ಯರಾಗಿದ್ದರೆ, ಜನಾಂಗೀಯತೆಗೆ ಯಾವುದೇ ಸ್ಥಾನವಿರುವುದಿಲ್ಲ. ಏಕೆಂದರೆ, ಒಂದೇ ಕುಟುಂಬದ ಸದಸ್ಯರ ನಡುವೆ ಜಾತಿ ಭೇದವಿರುವುದಿಲ್ಲ; ಕುಲಮಹಿಮೆಯೂ ಇರುವುದಿಲ್ಲ. ಎಲ್ಲರೂ ಒಂದೇ ಕುಟುಂಬದ ಮಕ್ಕಳಾದರೆ, ಹುಟ್ಟಿನ ಆಧಾರದಲ್ಲಿ ಜನರನ್ನು ಪ್ರತ್ಯೇಕಿಸುವ ಕ್ರೂರ ತಾರತಮ್ಯಕ್ಕೆ ಸ್ಥಾನವೆಲ್ಲಿದೆ?

ತಮ್ಮ ವಿದಾಯ ಭಾಷಣದಲ್ಲಿ, ಪ್ರವಾದಿ ಮುಹಮ್ಮದ್(ಸ) ರವರು ಜನರ ನಡುವಿನ ಎಲ್ಲಾ ತಾರತಮ್ಯಗಳನ್ನು ಮತ್ತು ಭಾಷೆ, ದೇಶ

ಮತ್ತು ಬಣ್ಣದ ಆಧಾರದಲ್ಲಿರುವ ಎಲ್ಲಾ ಬೇಧ-ಭಾವಗಳನ್ನು ಕೊನೆಗೊಳಿಸುತ್ತಾ ಹೇಳಿದರು. "ಅರಬ್ಬನಿಗೆ ಅರಬ್ಬೇತರರ ಮೇಲೆ, ಅರಬ್ಬೇತ-ರನಿಗೆ ಅರಬ್ಬನ ಮೇಲೆ, ಬಿಳಿಯನಿಗೆ ಕರಿಯನ ಮೇಲೆ, ಕರಿಯನಿಗೆ ಬಿಳಿಯನ ಮೇಲೆ ಯಾವುದೇ ಶ್ರೇಷ್ಠತೆಯಿಲ್ಲ. ನಿಮ್ಮೆಲ್ಲರ ತಂದೆ ಒಬ್ಬನೇ. ಆದಮರನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಮನು-ಷ್ಯರಲ್ಲಿರುವುದು ಎರಡೇ ಎರಡು ಜಾತಿಗಳು: ಸತ್ಯ-ವಿಶ್ವಾಸಿಗಳಾದ ಸತ್ಕರ್ಮಿಗಳು ಮತ್ತು ಸತ್ಯನಿಷೇಧಿ-ಗಳಾದ ದುಷ್ಕರ್ಮಿಗಳು."

ಸಹೋದರರರೇ...! ಇಸ್ಲಾಮಿನ ಪ್ರವಾದಿ ಪ್ರ-ಸ್ತುತಪಡಿಸಿದ ಈ ದೃಷ್ಟಿಕೋನವು ಎಷ್ಟು ಸುಂದರವಾಗಿದೆಯಲ್ಲವೇ! ಮನುಷ್ಯರೆಲ್ಲರ ತಂದೆ ಒಬ್ಬನೇ. ಆ ತಂದೆಯನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ನಂತರ ಅವರ ಸಂಗಾತಿಯನ್ನು ಸೃಷ್ಟಿಸಲಾಯಿತು. ನಂತರ, ಅವರಿಬ್ಬರಿಂದ, ಪುರುಷರು ಮತ್ತು ಮಹಿಳೆಯರನ್ನು ಒಳಗೊಂಡಿರುವ ಮಾನವ ಜನಾಂಗವನ್ನು ಸೃಷ್ಟಿಸಲಾಯಿತು. ಮಣ್ಣು ಪ್ರತಿಯೊಬ್ಬ ಮನುಷ್ಯನ ಭಾಗವಾಗಿದೆ. ಎಲ್ಲಾ ಮನುಷ್ಯರ ಜೈವಿಕ ಅಂಶವು ಒಂದೇ. ಸಂತಾನೋತ್ಪತ್ತಿ, ಬೆಳವಣಿಗೆ ಮತ್ತು

ಅಸ್ತಿತ್ವವು ಎಲ್ಲಾ ಧರ್ಮೀಯರಲ್ಲೂ, ಎಲ್ಲಾ ದೇಶೀಯರಲ್ಲೂ ಒಂದೇ ರೀತಿಯಾಗಿದೆ. ಚಿನ್ನ ಅಥವಾ ಬೆಳ್ಳಿಯಿಂದ ಸೃಷ್ಟಿಸಲಾದ ವ್ಯಕ್ತಿಯನ್ನು ನೀವು ನೋಡಿದ್ದೀರಾ...? ಹೀಗಿರುವಾಗ ಒಬ್ಬ-ರಿಗೊಬ್ಬರು ಅಹಂಭಾವ ತೋರುವುದರಲ್ಲಿ ಅರ್ಥವೇನಿದೆ? ಸೃಷ್ಟಿಕರ್ತನ ಮುಂದೆ ಎಲ್ಲರೂ ಸಮಾನರು. ದೇವಭಕ್ತಿಯು ಮಾನವ ಶ್ರೇಷ್ಠತೆಯ ಮಾನದಂಡವಾಗಿದೆ.

ವಿಷಯಸೂಚಿ

# ದೇಶವು ಮನುಷ್ಯನನ್ನು ಸುಧಾರಿಸುತ್ತದೆಯೇ?

ಇಸ್ಲಾಮ್ ಮಾನವಕುಲದ ಮುಂದಿಡುವ ಸಿದ್ಧಾಂತ ‘ಮನುಷ್ಯ’ ಎಂಬುದು ಮಾತ್ರ. ಕುರ್‌ಆನ್‌ನಲ್ಲಿ ಎಲ್ಲಿಯೂ ಅರಬ್ಬರು, ಭಾರತೀಯರು, ಯುರೋಪಿಯನ್ನರು, ಅಮೇರಿಕನ್ನರು, ಬಿಳಿಯರು, ಕರಿಯರು ಎಂಬ ಕರೆದಿರುವುದು ನೋಡಲು ಸಾಧ್ಯವಿಲ್ಲ. ಬದಲಿಗೆ, ಕುರ್‌ಆನ್ ಮಾತನಾಡುವುದು ಮನುಷ್ಯನೊಂದಿಗೆ; ಮತ್ತು ಸತ್ಯವಿಶ್ವಾಸಿಗಳೊಂದಿಗೆ. ಅವರು ಯಾವುದೇ ದೇಶ, ಭಾಷೆ ಅಥವಾ ಬಣ್ಣದವರಾದರೂ ಸರಿ. ಇಸ್ಲಾಂ ಮನುಷ್ಯನೊಂದಿಗೆ ಮಾತನಾಡುತ್ತದೆ. ಕುರ್‌ಆನ್‌ನಾದ್ಯಂತ ಮಾನವರೇ, ಮನುಷ್ಯರೇ, ಸತ್ಯವಿಶ್ವಾಸಿಗಳೇ, ಗ್ರಂಥದವರೇ ಮುಂತಾದ ಸಂಬೋಧನೆಗಳಿವೆಯೇ ಹೊರತು ಯಾವುದೇ ನಿರ್ದಿಷ್ಟ ರಾಷ್ಟ್ರ ಅಥವಾ ಬಣ್ಣವನ್ನು ಕರೆಯುವ ಸಂಬೋಧನೆಯಿಲ್ಲ. ಏಕೆಂದರೆ ಒಬ್ಬ ವ್ಯಕ್ತಿ ಯಾವ ದೇಶಕ್ಕೆ ಸೇರಿದವನು ಎನ್ನುವುದಕ್ಕಿಂತ ಅವನ ಮಾನವೀಯ ಮೌಲ್ಯಗಳೇನು ಎಂಬುದೇ ಹೆಚ್ಚು ಪ್ರಮುಖವಾಗಿದೆ.

ಕರುಣೆಯ ಪ್ರವಾದಿ—ಪ್ರವಾದಿ ಮುಹಮ್ಮದ್(ಸ) ಹುಟ್ಟಿದ ದೇಶದಲ್ಲಿಯೇ ಅವರನ್ನು ಮತ್ತು ಅವರ ಅನುಯಾಯಿಗಳನ್ನು ಕ್ರೂರ ಚಿತ್ರಹಿಂಸೆಗೆ ಗುರಿಪಡಿಸಿದ ಅಬೂಜಹಲ್ ಕೂಡ ಹುಟ್ಟಿ ಬೆಳೆದಿದ್ದನು. ಪವಿತ್ರ ಮಕ್ಕಾದಲ್ಲಿ ಜನನ ಪಡೆದ ಅಬೂಜಹಲ್ ಗೆ ಯಾವುದೇ ಮಾನವೀಯ ಮೌಲ್ಯಗಳಿರಲಿಲ್ಲ. ತನ್ನ ಸಂಪೂರ್ಣ ಆಯುಷ್ಯವನ್ನು ಭಾರತದ ಸ್ವಾತಂತ್ರ್ಯಕ್ಕಾಗಿ ಮುಡಿಪಾಗಿಟ್ಟ, ಭಾರತದ ಪಿತಾಮಹ ಮಹಾತ್ಮ ಗಾಂಧೀಜಿಯ ತಲೆಗೆ ಗುಂಡುಗಳನ್ನು ಹೊಡೆದು ಸಾಯಿಸಿದ ನಾಥೂರಾಂ ವಿನಾಯಕ ಗೋಡ್ಸೆ ಭಾರತೀಯನೇ ಆಗಿದ್ದ.

ಭಾರತವೆಂಬ ಮಹಾನ್ ದೇಶದ ನೂರಾರು ಜೈಲುಗಳಲ್ಲಿ ಕೊಳೆಯುತ್ತಿರುವ ಲಕ್ಷಾಂತರ ಅಪರಾಧಿಗಳಿದ್ದಾರೆ. ಅವರು ಭಾರತದಲ್ಲಿ ಜನಿಸಿದರು ಎಂಬ ಅಂಶವು ಅವರನ್ನು ಅಪರಾಧವೆಸಗದಂತೆ ತಡೆಯಲಿಲ್ಲ. ಸೌದಿ ಅರೇಬಿಯಾ ಮತ್ತು ಅಮೇರಿಕ; ಅಥವಾ ಇಸ್ಲಾಮಿಕ್ ಮತ್ತು ಕ್ರಿಶ್ಚಿಯನ್ ದೇಶಗಳ-ಲ್ಲಿರುವ ಅಸಂಖ್ಯ ಜೈಲುಗಳಲ್ಲಿ, ಅದೇ ದೇಶದ ಅತ್ಯಂತ ಕೆಟ್ಟ ಅಪರಾಧಿಗಳಿದ್ದಾರೆ. ಅವರು

ಹುಟ್ಟಿದ ನೆಲದ ಮಹಿಮೆಯು ಅವರನ್ನು ಅಪರಾಧಗಳಿಂದ ತಡೆಯಲಿಲ್ಲ. ಭಾರತೀಯ ಸಂಸ್ಕಾರ, ಅಥವಾ ಯುರೋಪಿಯನ್ ಸಂಸ್ಕಾರ, ಅಥವಾ ಇನ್ನಾವುದೇ ಸಂಸ್ಕಾರವು, ಅಂತಿಮವಾಗಿ ಮನುಷ್ಯ ಅದರಿಂದ ಒಳ್ಳೆಯ-ವನಾಗದಿದ್ದರೆ, ಆ ಸಂಸ್ಕಾರಗಳಿಂದ ಯಾವುದೇ ಪ್ರಯೋಜನವಿಲ್ಲ. ಸಂಸ್ಕಾರ ನೆಲೆಸಿರುವುದು ಮಣ್ಣಿನಲ್ಲೋ ಮರದಲ್ಲೋ ಅಲ್ಲ; ಬದಲಿಗೆ, ಮನುಷ್ಯನ ಮನಸ್ಸಿನಲ್ಲಿ. ಮನಸ್ಸು ಒಳ್ಳೆಯದಾದರೆ ಮನುಷ್ಯ ಒಳ್ಳೆಯವನಾಗುತ್ತಾನೆ, ಮನಸ್ಸು ಕೆಟ್ಟರೆ ಮನುಷ್ಯನು ಕೆಟ್ಟವನಾಗುತ್ತಾನೆ. ಒಂದು ದೇಶದ ಜನರು ಒಳ್ಳೆಯವರಾಗಿದ್ದರೆ ನಾವು ಅದನ್ನು ಒಳ್ಳೆಯ ದೇಶ ಎನ್ನುತ್ತೇವೆ. ಕೆಟ್ಟದಾದರೆ ಕೆಟ್ಟ ದೇಶ ಎನ್ನುತ್ತೇವೆ. ಆದರೆ ಅದು ಭಾಷೆಯಲ್ಲಿ ಬಳಸುವ ಒಂದು ಅಭಿವ್ಯಕ್ತಿ ಮಾತ್ರ. ಅಲ್ಲಾಹು ಸೃಷ್ಟಿಸಿದ ಪ್ರತಿಯೊಂದು ದೇಶ ಮತ್ತು ಮಣ್ಣು ಒಳ್ಳೆಯದೇ ಆಗಿದೆ. ಮಾನವನ ಕೈಗಳೇ ಅವುಗಳನ್ನು ಕೆಟ್ಟದಾಗಿ ಮಾಡುತ್ತಿವೆ.

ಸುಳ್ಳು ಹೇಳುವ, ಮೋಸ ಮತ್ತು ವಂಚನೆ ಮಾಡುವ, ಮದ್ಯಪಾನ, ವ್ಯಭಿಚಾರ, ಹೆತ್ತವರನ್ನು ದೂಷಿಸುವ ಒಂದು ವ್ಯಕ್ತಿ ವಾಸಿಸುತ್ತಿರುವುದು

ಸೌದಿ ಅರೇಬಿಯಾದಲ್ಲಾಗಿದ್ದರೆ, ಅದರಿಂದ ಏನು ಪ್ರಯೋಜನ? ಹಾಗೆಯೇ, ಒಳಿತನ್ನು ಆದೇಶಿಸುವ ಮತ್ತು ಕೆಡುಕನ್ನು ವಿರೋಧಿಸುವ, ಮದ್ಯಪಾನ ಮಾಡದ, ವ್ಯಭಿಚಾರ ಮಾಡದ ಮತ್ತು ತನ್ನ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳುವ ವ್ಯಕ್ತಿ ಆಫ್ರಿಕಾದಲ್ಲಿ ವಾಸಿಸುವುದಾದರೆ, ಅದರಲ್ಲಿರುವ ಹಾನಿಯೇನು?

ಸಹೋದರಿಯರನ್ನು ಕ್ರೂರವಾಗಿ ಅತ್ಯಾಚಾರಗೈದು ನಂತರ ನಿರ್ದಾಕ್ಷಿಣ್ಯ-ವಾಗಿ ಕೊಲ್ಲುವ, ಜನರನ್ನು ಅನ್ಯಾಯವಾಗಿ ಹತ್ಯೆ ಮಾಡುವ, ಮದ್ಯ ಮತ್ತು ಮಾದಕ ಪದಾರ್ಥಗಳ ವ್ಯಸನಿಯಾಗಿರುವ, ಜನರ ಆಸ್ತಿಯನ್ನು ಅನ್ಯಾಯವಾಗಿ ಲೂಟಿ ಮಾಡುವ, ಅಧಿಕಾರವನ್ನು ಬಳಸಿ ಜನರ ಹಗಲು ದರೋಡೆ ಮಾಡುವ, ಹೆತ್ತವರನ್ನು ವೃದ್ಧಾಶ್ರಮಕ್ಕೆ ತಳ್ಳುವ, ರೋಗಿಗಳನ್ನು ಶೋಷಣೆ ಮಾಡುವ... ಹೀಗೆ ನಮ್ಮ ದೇಶದಲ್ಲಿ ನಡೆಯುತ್ತಿರುವ ಲೆಕ್ಕವಿಲ್ಲದ-ಷ್ಟು ಅಪರಾಧಗಳ ಸಾವಿರಾರು ಸುದ್ದಿಗಳನ್ನು ನಾವು ದಿನನಿತ್ಯ ಓದುತ್ತಿದ್ದೇವೆ. ಭಾರತದಲ್ಲಿ ಹುಟ್ಟಿದರು ಎನ್ನುವುದು ಅವರನ್ನು ಅಪರಾ-ಧಗಳನ್ನು ಮಾಡದಂತೆ ತಡೆಯಲಿಲ್ಲ. ಆದರೆ

ಜನರಿಗೆ ಯಾವುದೇ ತೊಂದರೆ ಮಾಡದೆ ಗರಿಷ್ಠ ಒಳಿತು ಮಾಡುವ ಸಾವಿರಾರು ಜನರು ಈ ದೇಶದಲ್ಲಿದ್ದಾರೆ.

ಆದ್ದರಿಂದ ಬದಲಾಗಬೇಕಾದದ್ದು ಜನರು. ರಾಷ್ಟ್ರ, ಭಾಷೆ, ಬಣ್ಣ ಅಥವಾ ಜಾತಿಯ ಹೆಸರಿನಲ್ಲಿ ಜಂಭಕೊಚ್ಚುವುದರಿಂದ ಅಥವಾ ಹೆಮ್ಮೆ ಪಡುವುದರಿಂದ ಮನುಷ್ಯನ ಮಾನವೀಯ ಅಪಮೌಲ್ಯವನ್ನು ಪರಿಹರಿಸಲಾಗುವುದಿಲ್ಲ.

ಮಾನವನ ಮನಸ್ಸನ್ನು ಸಂಸ್ಕರಿಸಲು ಅಗತ್ಯವಿರುವ ದೋಷರಹಿತ ದೈವಿಕ ಮಾರ್ಗ-ದರ್ಶನದ ಮೂಲಕವಲ್ಲದೆ ಮಾನವ ಬಿಕ್ಕಟ್ಟಿಗೆ ಪರಿಹಾರವಿಲ್ಲ.

ನೀವು ಯಾವುದೇ ದೇಶದವರು, ಯಾವುದೇ ಭಾಷೆಯವರು, ಅಥವಾ ಯಾವುದೇ ಬಣ್ಣ-ದವರಾಗಿದ್ದರೂ ಸರಿ, ಒಳ್ಳೆಯ ಮನುಷ್ಯರಾಗಿ ಬಾಳಿ. ನಿಮ್ಮನ್ನು ಸೃಷ್ಟಿಸಿದ ಸೃಷ್ಟಿಕರ್ತ-ನೊಂದಿಗೆ, ತಂದೆ-ತಾಯಿಗಳೊಂದಿಗೆ, ಗಂಡನೊಂದಿಗೆ ಅಥವಾ ಹೆಂಡತಿಯೊಂದಿಗೆ, ಮಕ್ಕಳು, ನೆರೆಹೊರೆಯವರು, ದೇಶವಾಸಿಗಳು, ಆಡಳಿತಗಾರರು ಮತ್ತು ಆಡಳಿತ

ವ್ಯವಸ್ಥೆಗಳೊಂದಿಗೆ ನಿಮಗೆ ಅನೇಕ ಹೊಣೆಗಾರಿ-ಕೆಗಳಿವೆ. ಅವೆಲ್ಲವನ್ನೂ ನೆರವೇರಿಸಿ ಅವರೆಲ್ಲರ ಅಭ್ಯುದಯಾಕಾಂಕ್ಷಿಗಳಾಗಿ ಜೀವನ ನಡೆಸಿ.

ವಿಷಯಸೂಚಿ

# ದೈವಿಕ ಮಾರ್ಗದರ್ಶನ ಮತ್ತು ಮಾನವ ವಿಮೋಚನೆ

ಇಸ್ಲಾಂ ಮುಂದಿಡುವ ಇನ್ನೊಂದು ಆಶಯವೇನೆಂದರೆ, ಇಂತಹ ಬದುಕಿಗೆ ಅಗತ್ಯವಾದ ಮಾರ್ಗದರ್ಶನವನ್ನು ನಿಮ್ಮ ಸೃಷ್ಟಿಕರ್ತ ನಿಮಗೆ ನೀಡುತ್ತಾನೆ ಎಂಬುದು.

ಮಾನವ ಜೀವನವು ಜವಾಬ್ದಾರಿಯಿಂದ ನಿರ್ವ-ಹಿಸಬೇಕಾದದ್ದು ಎಂದು ಇಸ್ಲಾಂ ಕಲಿಸುತ್ತದೆ. ತನ್ನನ್ನು ಸೃಷ್ಟಿಸಿದ ಒಬ್ಬ ದೇವನಿದ್ದಾನೆ ಮತ್ತು ಅವನು ಒಂದು ನಿರ್ದಿಷ್ಟ ಗುರಿಯೊಂದಿಗೆ ತನ್ನನ್ನು ಸೃಷ್ಟಿಸಿದ್ದಾನೆ ಎಂಬ ಪ್ರಜ್ಞೆಯು ಮಾನವ ಜೀವನವನ್ನು ಸಾರ್ಥಕಗೊಳಿಸುತ್ತದೆ.

ಉದಾಹರಣೆಗೆ, ಒಂದು ಕಚೇರಿಯಲ್ಲಿ ಕೆಲಸ ಮಾಡುವ ಉದ್ಯೋಗಿಯನ್ನೇ ನೋಡಿ. ನನ್ನ ಮೇಲೆ ನಿಗಾ ಇಡುವ ಒಬ್ಬ ಮ್ಯಾನೇಜರ್ ಇದ್ದಾನೆ, ನಾನು ಇಂತಿಂತಹ ಕೆಲಸವನ್ನು ಮಾಡಬೇಕು, ಅದನ್ನು ಸರಿಯಾಗಿ ನಿರ್ವಹಿಸದಿ-ದ್ದರೆ ನನಗೆ ಇಂತಿಂತಹ ನಷ್ಟಗಳಿವೆ, ಕೆಲಸವನ್ನು ಚೆನ್ನಾಗಿ ನಿರ್ವಹಿಸಿದರೆ ಪ್ರಮೋಶನ್ ಮುಂತಾದ ಅನೇಕ ಲಾಭಗಳಿವೆ ಎಂದು ಆಳ ಮನಸ್ಸಿನಿಂದ

ತಿಳಿದಾಗ ಮಾತ್ರ ಅವನು ಆ ಕೆಲಸವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬಲ್ಲ. ಅಥವಾ ಒಬ್ಬ ವಿದ್ಯಾರ್ಥಿಯನ್ನೇ ನೋಡಿ. ತನ್ನನ್ನು ಸದಾ ವೀಕ್ಷಿಸುವ ಒಬ್ಬ ಶಿಕ್ಷಕನಿದ್ದಾನೆ, ಚೆನ್ನಾಗಿ ಓದಿದರೆ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಬಹುದು, ಭವಿಷ್ಯದಲ್ಲಿ ಉತ್ತಮ ಪ್ರಜೆಯಾಗಿ ಬದುಕಬಹುದು, ಇಲ್ಲದಿದ್ದರೆ ಅನುತ್ತೀರ್ಣನಾಗಿ ಓದಿದ್ದನ್ನೇ ಪುನಃ ಓದಬೇಕಾಗುತ್ತದೆ, ಜೀವನದಲ್ಲಿ ವಿಫಲನಾಗಬೇಕಾಗುತ್ತದೆ ಎಂಬ ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಾಗ ಮಾತ್ರ ಅವನು ಹೊಣೆಗಾರಿಕೆಯುಳ್ಳ ವಿದ್ಯಾರ್ಥಿಯಾಗುತ್ತಾನೆ. ಇದೇ ರೀತಿ, ನನ್ನನ್ನು ಸೃಷ್ಟಿಸಿದ ಒಬ್ಬ ದೇವನಿದ್ದಾನೆ, ಅವನು ಯಾವಾಗಲೂ ನನ್ನನ್ನು ವೀಕ್ಷಿಸುತ್ತಿದ್ದಾನೆ; ನನ್ನ ಬದುಕಿಗೆ ಕೆಲವು ನಿರ್ದಿಷ್ಟ ಗುರಿಗಳಿವೆ ಎಂದು ತಿಳಿದಾಗ ಮಾತ್ರ ಮನುಷ್ಯನಿಗೆ ಜವಾಬ್ದಾರಿಯಿಂದ ಬದುಕಲು ಸಾಧ್ಯವಾಗುತ್ತದೆ.

ಇನ್ನೊಬ್ಬರಿಗೆ ಮೋಸ ಮಾಡಲು, ಕೊಲ್ಲಬೇಕಾಗಿ ಬಂದರೆ ಕೊಲ್ಲಲು, ಯಾವುದೇ ಮಾರ್ಗದಿಂದಾದಲೂ ಹಣ ಸಂಪಾದಿಸಲು, ಆಡಳಿತವನ್ನು ಸ್ವಾರ್ಥ ಸಾಧನೆಗೆ ಬಳಸಿಕೊಳ್ಳಲು, ಮದ್ಯಪಾನ ಮಾಡಲು, ವ್ಯಭಿಚಾರ ಮಾಡಲು

ಮನುಷ್ಯನು ಧೈರ್ಯ ತೋರುವುದು ಜೀವನದ ಅಂತಿಮ ಗುರಿಯನ್ನು ಮತ್ತು ಸಾವಿನ ನಂತರ ವಿಚಾರಣೆಯನ್ನು ಎದುರಿಸಬೇಕಾಗಿದೆಯೆಂಬ ಯೋಚನೆಯಿಲ್ಲದ ಕಾರಣದಿಂದಾಗಿದೆ.

ಒಬ್ಬ ವ್ಯಕ್ತಿ ತನ್ನ ಸ್ವಂತ ಮಕ್ಕಳನ್ನು ಹಾದರಕ್ಕೆ ಬಳಸುವುದು, ಇತರರ ಮಲಗುವ ಕೋಣೆಗಳಲ್ಲಿ ಗುಪ್ತ ಕ್ಯಾಮೆರಾಗಳನ್ನು ಅಳವಡಿಸುವುದು, ತನ್ನ ಹೆತ್ತವರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುವುದು, ಗಂಡನ ಅನುಪಸ್ಥಿತಿಯಲ್ಲಿ ಬೇರೊಬ್ಬನನ್ನು ಮನೆಗೆ ಕರೆತರುವುದು, ಭ್ರಷ್ಟಾಚಾರ ಮತ್ತು ಲಂಚದ ಮೂಲಕ ದೇಶದ ಪ್ರಜೆಗಳನ್ನು ವಂಚಿಸುವುದು, ಸ್ವಾರ್ಥಕ್ಕಾಗಿ ಮತ್ತು ರಾಜಕೀಯ ಲಾಭಕ್ಕಾಗಿ ಕೋಮುಗಲಭೆ ಮತ್ತು ಹತ್ಯಾಕಾಂಡ-ಗಳನ್ನು ಆಯೋಜಿಸುವುದು, ಭಯೋತ್ಪಾದನಾ ಕೃತ್ಯಗಳ ಮೂಲಕ ದೇಶದ ಶಾಂತಿಯನ್ನು ಹಾಳುಗೆಡಹುವುದು, ನಾನು ಮಾಡುವ ಕೃತ್ಯಗಳನ್ನು ನೋಡುತ್ತಿರುವ ಒಬ್ಬ ದೇವನು ಇದ್ದಾನೆ ಮತ್ತು ನಾನು ಮಾಡಿದ ತಪ್ಪಿಗೆ ಅವನು ತಕ್ಕ ಶಿಕ್ಷೆಯನ್ನು ನೀಡುತ್ತಾನೆ ಎಂಬ ಪ್ರಜ್ಞೆಯಿಲ್ಲದ ಕಾರಣದಿಂದಾಗಿದೆ.

ಆದರೆ ಇಸ್ಲಾಂ ಹೇಳುತ್ತದೆ: ಓ ಮಾನವಾ... ನಿನ್ನನ್ನು

ವ್ಯರ್ಥವಾಗಿ ಸೃಷ್ಟಿಸಲಾಗಿಲ್ಲ. ನೀನು ಸ್ವಯಂ ಅಸ್ತಿತ್ವಕ್ಕೆ ಬಂದಿದ್ದರೆ ನೀನು ಅಂದುಕೊಂಡಂತೆ ಬದುಕಬಹುದಿತ್ತು. ಇಲ್ಲ... ನೀನು ಎಂದಿಗೂ ಸ್ವಯಂ ಅಸ್ತಿತ್ವಕ್ಕೆ ಬಂದವನಲ್ಲ. ಅದ್ಭುತವಾದ ಈ ಮಹಾ ಪ್ರಪಂಚ ಮತ್ತು ಅದರಲ್ಲಿರುವ ಜೀವಿಗಳು ಯಾರೂ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂದವರಲ್ಲ.

⇇ ವಿಷಯಸೂಚಿ

# ಮನುಷ್ಯನನ್ನು ಗುರಿಯಿಲ್ಲದೆ ಸೃಷ್ಟಿಸಲಾಗಿದೆಯೇ?

ನಾವು ಚಲಾಯಿಸುವ ವಾಹನವು ಅನೇಕ ವಿಜ್ಞಾನಿಗಳು ಮತ್ತು ಮೆಕ್ಯಾನಿಕ್‌ಗಳ ಪ್ರಯತ್ನದ ಫಲವಾಗಿದೆ. ಹಲವಾರು ಕಬ್ಬಿಣ ವಸ್ತುಗಳನ್ನು ಒಟ್ಟುಗೂಡಿಸಿ ದೀರ್ಘಕಾಲ ಹಾಗೇ ಇಟ್ಟರೆ, ಅದು ವಿಮಾನವಾಗಿ ಮಾರ್ಪಡುತ್ತದೆಯೇ? ಮನುಷ್ಯ ನಿರ್ಮಿಸುವ ಅತ್ಯಂತ ಸರಳ ವಸ್ತುಗಳ ಹಿಂದೆಯೂ ದೊಡ್ಡ ಬುದ್ಧಿವಂತಿಕೆ ಮತ್ತು ಕಠಿಣ ಪರಿಶ್ರಮವಿಲ್ಲವೇ? ಹಾಗಾದರೆ.. ಸಸ್ಯಗಳು, ಹೂಗಳು, ಮರಗಳು, ಪಕ್ಷಿಗಳು, ಪ್ರಾಣಿಗಳು, ಮೀನುಗಳು, ಮತ್ತು ಕಕ್ಷೆಗಳಲ್ಲಿ ಘರ್ಷಣೆಯಿಲ್ಲದೆ ಚಲಿಸುವ ಕೋಟ್ಯಂತರ ನಕ್ಷತ್ರಗಳು ಒಳಗೊಂಡಿರುವ ಈ ಮಹಾನ್ ಪ್ರಪಂಚದ ನಿರ್ಮಾಣದ ಹಿಂದೆ ಮಹಾ ಬುದ್ಧಿವಂತಿಕೆ ಮತ್ತು ಸಮರ್ಪಕ ಯೋಜನೆ ಇಲ್ಲವೇ?

ಮಾನವ ದೇಹವೆಂಬ ಮಹಾನ್ ವಿದ್ಯಮಾನವು ಕೂಡ ಸೃಷ್ಟಿಕರ್ತನ ಕಡೆಗೆ ಬೆಳಕನ್ನು ಚೆಲ್ಲುತ್ತದೆ. ಗರ್ಭಾಶಯದೊಳಗೆ ಸ್ರವಿಸಲಾದ ವೀರ್ಯವನ್ನು ಲಕ್ಷಣಯುಕ್ತ ಮಗುವಾಗಿ ಹೊರತರುವುದು

ಯಾರು? ಆ ಮಗುವಿಗೆ ಭೂಮಿಯ ಮೇಲೆ ಬದುಕಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮೊದಲೇ ಸಿದ್ಧಪಡಿಸಿದ್ದು ಯಾರು?

ಹೌದು...ಇಡೀ ಪ್ರಪಂಚವನ್ನು ಯಾವುದೇ ನ್ಯೂನತೆಗಳಿಲ್ಲದ ರೀತಿಯಲ್ಲಿ ಸೃಷ್ಟಿಸಿದ ನೈಜ ಆರಾಧ್ಯನಾದ ಅಲ್ಲಾಹನೇ ಆ ಮಗುವನ್ನು ಸೃಷ್ಟಿಸಿದವನು. ಸೃಷ್ಟಿಕರ್ತನ ಬಗ್ಗೆ ಮತ್ತು ಸೃಷ್ಟಿಯ ಉದ್ದೇಶದ ಬಗ್ಗೆ ವಿವರಣೆ ನೀಡುವ ಕೆಲವು ಕುರ್‌ಆನ್ ಶ್ಲೋಕಗಳನ್ನು ಗಮನಿಸಿ.

“ಆಧಿಪತ್ಯವು ಯಾರ ಕೈಯ್ಯಲ್ಲಿದೆಯೋ ಅವನು ಅನುಗ್ರಹಪೂರ್ಣನು. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ನಿಮ್ಮಲ್ಲಿ ಅತ್ಯುತ್ತಮವಾಗಿ ಕರ್ಮವೆಸಗುವವರು ಯಾರು ಎಂದು ಪರೀಕ್ಷಿಸುವುದಕ್ಕಾಗಿ ಅವನು ಮರಣ ಮತ್ತು ಜೀವನವನ್ನು ಸೃಷ್ಟಿಸಿದನು. ಅವನು ಮಹಾ ಶಕ್ತಿಶಾಲಿ ಮತ್ತು ಅತ್ಯಧಿಕ ಕ್ಷಮಿಸುವವನಾಗಿದ್ದಾನೆ. ಅವನು ಏಳು ಆಕಾಶಗಳನ್ನು ಪದರಗಳಾಗಿ ಸೃಷ್ಟಿಸಿದನು. ಪರಮ ದಯಾಮಯನ ಸೃಷ್ಟಿಯಲ್ಲಿ ಯಾವುದೇ ನ್ಯೂನತೆಯನ್ನೂ ನೀವು ಕಾಣಲಾರಿರಿ. ನೀವು ದೃಷ್ಟಿಯನ್ನು ಮತ್ತೊಮ್ಮೆ ಮರಳಿಸಿ ನೋಡಿ. ಯಾವುದಾದರೂ ಬಿರುಕನ್ನು

ನೀವು ಕಾಣುತ್ತಿರುವಿರಾ?” [ಕುರ್‌ಆನ್ 67:1-3]

“ನಿಶ್ಚಯವಾಗಿಯೂ ಆಕಾಶಗಳನ್ನು ಮತ್ತು ಭೂಮಿಯನ್ನು ಆರು ದಿನಗಳಲ್ಲಿ ಸೃಷ್ಟಿಸಿದ ಆ ಅಲ್ಲಾಹನೇ ನಿಮ್ಮ ಪ್ರಭು. ನಂತರ ಅವನು ಕಾರ್ಯನಿರ್ವಹಣೆ ಮಾಡುತ್ತಾ ಸಿಂಹಾಸನಾರೂಢನಾದನು. ಅವನ ಅನುಮತಿಯ ನಂತರವಲ್ಲದೆ ಯಾವುದೇ ಶಿಫಾರಸುಗಾರನೂ ಶಿಫಾರಸು ಮಾಡುವುದಿಲ್ಲ. ಅವನೇ ನಿಮ್ಮ ಪ್ರಭುವಾದ ಅಲ್ಲಾಹು. ಆದ್ದರಿಂದ ನೀವು ಅವನನ್ನು ಆರಾಧಿಸಿರಿ. ನೀವು ಚಿಂತಿಸಿ ಗ್ರಹಿಸುವುದಿಲ್ಲವೇ? ನಿಮ್ಮೆಲ್ಲರ ಮರಳುವಿಕೆಯು ಅವನೆಡೆಗೇ ಆಗಿದೆ. ಇದು ಅಲ್ಲಾಹನ ಸತ್ಯ ವಾಗ್ದಾನವಾಗಿದೆ. ಖಂಡಿತವಾಗಿಯೂ ಅವನು ಸೃಷ್ಟಿಯನ್ನು ಆರಂಭಿಸುತ್ತಾನೆ ಮತ್ತು ಸತ್ಯವಿಶ್ವಾಸಿಗಳಿಗೆ ಹಾಗೂ ಸತ್ಕರ್ಮವೆಸಗಿದವರಿಗೆ ನ್ಯಾಯಯುತ ಪ್ರತಿಫಲವನ್ನು ನೀಡುವುದಕ್ಕಾಗಿ, ನಂತರ ಅದನ್ನು ಪುನರಾವರ್ತಿಸುತ್ತಾನೆ. ಸತ್ಯನಿಷೇಧಿಗಳು ಯಾರೋ, ಅವರು ಸತ್ಯವನ್ನು ನಿಷೇಧಿಸಿದ ಫಲವಾಗಿ ಅವರಿಗೆ ಕುದಿಯುವ ಪಾನೀಯ ಮತ್ತು ಯಾತನಾಮಯ ಶಿಕ್ಷೆಯಿದೆ. ಸೂರ್ಯನನ್ನು ಒಂದು ಪ್ರಕಾಶವಾಗಿ ಮತ್ತು ಚಂದ್ರನನ್ನು ಒಂದು ಶೋಭೆಯಾಗಿ

ಮಾಡಿದವನು ಅವನೇ. ನೀವು ವರ್ಷಗಳ ಸಂಖ್ಯೆ ಮತ್ತು ಎಣಿಕೆಯನ್ನು ತಿಳಿದುಕೊಳ್ಳುವುದಕ್ಕಾಗಿ ಅವನು ಅದಕ್ಕೆ (ಚಂದ್ರನಿಗೆ) ಕೆಲವು ಹಂತಗಳನ್ನು ನಿರ್ಣಯಿಸಿದನು. ಅಲ್ಲಾಹು ಅದನ್ನು ಸತ್ಯದೊಂದಿಗಲ್ಲದೆ ಸೃಷ್ಟಿಸಿಲ್ಲ. ತಿಳಿದುಕೊಳ್ಳುವ ಜನರಿಗಾಗಿ ಅವನು ದೃಷ್ಟಾಂತಗಳನ್ನು ವಿವರಿಸಿಕೊಡುತ್ತಿದ್ದಾನೆ. ಖಂಡಿತವಾಗಿಯೂ ರಾತ್ರಿ ಮತ್ತು ಹಗಲುಗಳ ಬದಲಾವಣೆಯಲ್ಲಿಯೂ, ಅಲ್ಲಾಹು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಸೃಷ್ಟಿಸಿರುವ ವಸ್ತುಗಳಲ್ಲಿಯೂ ಭಯಭಕ್ತಿಯಿಂದ ಜೀವಿಸುವ ಜನರಿಗೆ ಅನೇಕ ದೃಷ್ಟಾಂತಗಳಿವೆ." [ಕುರ್‌ಆನ್ 10:3-6]

ಹೌದು ಸಹೋದರರೇ... ಅಲ್ಲಾಹನು ಈ ಶ್ಲೋಕಗಳ ಮೂಲಕ ಜನರಿಗೆ ತಿಳಿಸುವ ಕೆಲವು ಸತ್ಯಗಳಿವೆ. ಮನುಷ್ಯರು ಭಾವಿಸುವಂತೆ, ದೇವನು ಈ ಮಹಾನ್ ಪ್ರಪಂಚವನ್ನು ತಮಾಷೆಗಾಗಿ ಸೃಷ್ಟಿಸಲಿಲ್ಲ ಎಂದು ಅವನು ಖಾತರಿಯಾಗಿ ಹೇಳಿದ್ದಾನೆ.

ಮನುಷ್ಯನು ಸ್ರವಿಸುವ ವೀರ್ಯದ ಒಂದು ಬಿಂದು ಉತ್ಪಾದನೆಯಾಗಲು ದೇಹದಲ್ಲಿ ಏನೆಲ್ಲಾ ರಾಸಾಯನಿಕ ಪ್ರಕ್ರಿಯೆಗಳು ನಡೆಯಬೇಕು....

ಆ ವೀರ್ಯವು ಗರ್ಭದಲ್ಲಿ ಒಂದು ಶಿಶುವಾಗಿ ಮಾರ್ಪಡುವ ಮುನ್ನ ಏನೆಲ್ಲಾ ಪ್ರಕ್ರಿಯೆಗಳು ನಡೆಯುತ್ತವೆ.... ಹೀಗೆ ಸಾವಿರಾರು ವರ್ಷಗಳಿಂದ ಮನುಷ್ಯರನ್ನು ಸೃಷ್ಟಿಸುತ್ತಿರುವ ದೇವರಿಗೆ ಇದರ ಹಿಂದೆ ಯಾವುದೇ ಉದ್ದೇಶವಿಲ್ಲ ಎಂದು ಮೂರ್ಖರಲ್ಲದೆ ಬೇರೆ ಯಾರಾದರೂ ಭಾವಿಸುವರೇ? ಮಳೆ-ಗಾಳಿ, ಹಗಲು-ರಾತ್ರಿ, ಹಣ್ಣು-ಹಂಪಲುಗಳು, ಎಲೆ, ತರಕಾರಿ, ಬೀಜ, ಧಾನ್ಯಗಳು, ಮೀನು, ಮಾಂಸಾಹಾರ ಎಲ್ಲವೂ ನಮ್ಮ ಕೈ ಸೇರಬೇಕಾದರೆ, ಈ ಮಹಾನ್ ವಿದ್ಯಮಾನಗಳ ಹಿಂದಿರುವ ಸೂತ್ರಧಾರಿ ಯಾರು ಎಂದು ನಾವು ಎಂದಾದರೂ ಯೋಚಿಸಿದ್ದೇವೆಯೇ...?

⇐ ವಿಷಯಸೂಚಿ

# ಸೃಷ್ಟಿಕರ್ತ ಮಾತ್ರ ಮಾರ್ಗದರ್ಶನ ನೀಡಬಲ್ಲ

ಕುರ್‌ಆನ್ ಶ್ಲೋಕದ ಮೂಲಕ ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳೋಣ.

“ಅವನು (ಫರೋಹ) ಕೇಳಿದನು: ಓ ಮೂಸಾ! ಹಾಗಾದರೆ ನಿಮ್ಮಿಬ್ಬರ ಪ್ರಭು ಯಾರು? ಮೂಸಾ ಹೇಳಿದರು: ಎಲ್ಲಾ ವಸ್ತುಗಳನ್ನು ಸೃಷ್ಟಿಸಿ ಅವುಗಳಿಗೆ ಸಮರ್ಪಕ ಮಾರ್ಗದರ್ಶನ ನೀಡಿದವನಾರೋ ಅವನೇ ನಮ್ಮ ಪ್ರಭು.” [ಕುರ್‌ಆನ್ 20:49-50]

ಎಲ್ಲಾ ಜೀವ ಮತ್ತು ನಿರ್ಜೀವ ವಸ್ತುಗಳನ್ನು ಸೃಷ್ಟಿಸಿದ ಮತ್ತು ಪ್ರತಿಯೊಂದಕ್ಕೂ ಸಮರ್ಪಕ ಮಾರ್ಗದರ್ಶನ ನೀಡಿದ ಸೃಷ್ಟಿಕರ್ತ ಮಾತ್ರ ಮನುಷ್ಯನಿಗೆ ಸರಿಯಾದ ಮತ್ತು ಸಂಪೂರ್ಣವಾದ ಮಾರ್ಗದರ್ಶನವನ್ನು ನೀಡಬಲ್ಲ. ಯಾವ ಸೃಷ್ಟಿಕರ್ತನು ಸ್ಥಾಪಿಸಿದ ನಿಯಮಗಳನ್ನು ಅನುಸರಿಸುವಾಗ, ವಿಶ್ವವು ಕ್ರಮಬದ್ಧವಾಗಿ ಮತ್ತು ಶಾಂತಿಯುತವಾಗಿ ಚಲಿಸುತ್ತದೋ, ಅದೇ ಸೃಷ್ಟಿಕರ್ತನ ಮಾರ್ಗ ನಿರ್ದೇಶನಗಳನ್ನು ಅನುಸರಿಸುವಾಗ ಮನುಷ್ಯ ಜೀವನವು ಕೂಡ

ಕ್ರಮಬದ್ಧವೂ, ಶಾಂತಿಯುತವೂ ಆಗುತ್ತದೆ ಎಂಬ ಸರಳ ಮತ್ತು ತಾರ್ಕಿಕ ಕಲ್ಪನೆಯನ್ನು ಇಸ್ಲಾಂ ಮುಂದಿಡುತ್ತದೆ.

ನಮಗೆ ಬಾಯಾರಿಕೆಯಾಗುತ್ತದೆ ಎಂದು ತಿಳಿದ ಒಂದು ಶಕ್ತಿ ಪ್ರಪಂಚದಲ್ಲಿ ಇಲ್ಲದಿರು-ತ್ತಿದ್ದರೆ ನಮಗೆ ಕುಡಿಯಲು ನೀರು ಸಿಗುತ್ತಿರ-ಲಿಲ್ಲ. ನಮಗೆ ಹಸಿವಾಗುತ್ತದೆ ಎಂದು ತಿಳಿದ ಆ ಶಕ್ತಿಯೇ ನಮಗೆ ಇಲ್ಲಿ ಆಹಾರದ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. ನಮ್ಮ ಮಾನವನ್ನು ಮುಚ್ಚಲು ಬಟ್ಟೆಗಳು, ಶಾಖ ಮತ್ತು ಶೀತದಿಂದ ತಪ್ಪಿಸಿ-ಕೊಳ್ಳುವ ವ್ಯವಸ್ಥೆಗಳು, ಸಂವಹನ ಸಾಧನಗಳು, ಸಂಸರ್ಗಕ್ಕಾಗಿ ಸಂಗಾತಿಗಳು ಎಲ್ಲವೂ ಇಲ್ಲಿವೆ. ನಮ್ಮ ಬಗ್ಗೆ ಅತೀವ ಆಸಕ್ತಿಯಿರುವ ಒಬ್ಬ ಕರುಣಾಮಯಿಯಾದ ಸೃಷ್ಟಿಕರ್ತನಲ್ಲದೆ ಇನ್ನಾರೂ ಇವುಗಳನ್ನು ಮಾಡಲು ಸಾಧ್ಯವಿಲ್ಲ.

ಸಹೋದರರೇ, ಯೋಚಿಸಿ… ಹಾಗಾದರೆ, ನಮ್ಮ ಜೀವನ ಹೇಗಿರಬೇಕು, ನಾವು ಹೇಗೆ ಬದುಕಬೇಕು ಎಂಬ ಒಂದು ನೀಲನಕಾಶೆ ಖಂಡಿತ ಅವನಲ್ಲಿರ-ಬೇಕು….. ಅಲ್ಲ ನಮ್ಮ ಜೀವನವನ್ನು ನಿರ್ಧರಿಸುವ ಅಧಿಕಾರ ಅವನಿಗೆ ಮಾತ್ರವಿದೆ.

ಸಹೋದರರೇ... ಯೋಚಿಸಿ ನೋಡಿ... ಯಾರು ನಮ್ಮನ್ನು ಸೃಷ್ಟಿಸಿದ್ದು? ಯಾರು ನಮ್ಮ ಬಣ್ಣವನ್ನು ನಿರ್ಧರಿಸಿದ್ದು? ಭಾಷೆ, ದೇಶ, ಎತ್ತರ, ಸೌಂದರ್ಯ, ಆಕಾರ.....ಇವುಗಳಲ್ಲಿ ಯಾವುದಾದರೂ ಒಂದರಲ್ಲಿ ನಮಗೆ ಪಾಲಿದೆಯೇ? ನಮ್ಮ ನಿರ್ಧಾರವಿದೆಯೇ? ನಮ್ಮ ಇಚ್ಛೆಯಂತೆ ನಾವು ಹುಟ್ಟಿದ್ದೇವೆಯೇ? ನಮ್ಮ ಬಯಸಿದಂತೆ ನಾವು ಸಾಯುತ್ತೇವೆಯೇ? ಸಾವಿನ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ನಮಗಿದೆಯೇ? ಆತ್ಮದ ಬಗ್ಗೆ... ಇಲ್ಲ, ಸ್ವಲ್ಪವೂ ಇಲ್ಲ.....

ಮೇಲಿನ ಎಲ್ಲಾ ಪ್ರಶ್ನೆಗಳಿಗೆ ನಾವು ನೀಡುವ ಉತ್ತರ: ಇಲ್ಲ, ಅದು ಯಾವುದೂ ನಾವಲ್ಲ; ಅದರಲ್ಲಿ ನಮಗೆ ಯಾವುದೇ ಪಾಲಿಲ್ಲ.

ನಾವು ವಾಸಿಸುವ ಭೂಮಿಯನ್ನು ನಿರ್ಮಿಸಿದ್ದು ಯಾರು? ನಾವು...? ಅಥವಾ ನಮ್ಮ ಪೂರ್ವಜರಲ್ಲಿ ಯಾರಾದರೂ...? ಇಲ್ಲವೇ ಇಲ್ಲ. ದಿನ-ರಾತ್ರಿಗಳು, ಸೂರ್ಯ, ಚಂದ್ರ, ನಕ್ಷತ್ರಗಳು-ಗಾಳಿ-ಮಳೆ-ನದಿ-ಸಮುದ್ರ-ಮರಗಳು ಇವುಗಳಲ್ಲಿ ಯಾವುದರೊಂದಿಗೂ ನಮಗೆ ಏನೂ ಸಂಬಂಧವಿಲ್ಲ; ಏನೂ ಪಾಲಿಲ್ಲ. ಎಲ್ಲವೂ ನಾವು

ಹುಟ್ಟುವುದಕ್ಕೆ ಮುಂಚೆಯೇ ಇಲ್ಲಿ ಅಸ್ತಿತ್ವದಲ್ಲಿವೆ.

ಭೂಮಿ ನಡುಗಿದರೆ ಅದನ್ನು ತಡೆಯಲು ನಮಗೆ ಸಾಧ್ಯವಿಲ್ಲ. ಆಕಾಶ ಕುಸಿದರೆ ಅದನ್ನು ಎತ್ತಿ ಹಿಡಿಯಲು ನಮಗೆ ಸಾಧ್ಯವಿಲ್ಲ. ಗಾಳಿಯನ್ನು ನಿಯಂತ್ರಿಸಲು ನಮ್ಮಿಂದ ಸಾಧ್ಯವಿಲ್ಲ... ಅಲೆಗಳನ್ನು ಹತೋಟಿಯಲ್ಲಿಡಲು ನಮ್ಮಿಂದ ಸಾಧ್ಯವಿಲ್ಲ. ಇಲ್ಲ.... ನಮ್ಮಿಂದ ಏನೂ ಸಾಧ್ಯವಿಲ್ಲ... ಸರಿಯಲ್ಲವೇ? ಇಂತಹ ಸಾವಿರಾರು ಸಾಧ್ಯವಿ-ಲ್ಲಗಳನ್ನು ಹೇಳಬಹುದು..... ಯಾವುದಕ್ಕೂ ಸಾಧ್ಯವಿದೆ ಎಂದು ಹೇಳಲು ನಮಗೆ ಸಾಧ್ಯವಿಲ್ಲ.

ಇವೆಲ್ಲವೂ ನಮ್ಮ ನಿಯಂತ್ರಣದಲ್ಲಿಲ್ಲದಿದ್ದರೆ, ಮತ್ತು ಅದರಲ್ಲಿ ನಮಗೆ ಯಾವುದೇ ಪಾಲಿಲ್ಲದಿ-ದ್ದರೆ, ನಮ್ಮ ಜೀವನ ಹೇಗಿರಬೇಕು ಎಂಬುದನ್ನು ನಿರ್ಧರಿಸಲು ನಮಗೆ ಯಾವುದೇ ಅಧಿಕಾರವಿಲ್ಲ. ಆ ಅಧಿಕಾರವಿರುವುದು ನಮ್ಮನ್ನು ಸೃಷ್ಟಿಸಿದ ಸೃಷ್ಟಿಕರ್ತನಿಗೆ. ಅಲ್ಲಾಹನು ಮಾನವಕುಲದ ತಂದೆಯೊಡನೆ ಹೇಳುವುದು ನೋಡಿ:

“ನಾವು ಹೇಳಿದೆವು: ನೀವೆಲ್ಲರೂ ಇಲ್ಲಿಂದ ಇಳಿದು ಹೋಗಿರಿ. ನಂತರ ನನ್ನ ಕಡೆಯ ಮಾರ್ಗದರ್ಶನವು ನಿಮ್ಮ ಬಳಿಗೆ ಬರುವಾಗ,

ಆ ನನ್ನ ಮಾರ್ಗದರ್ಶನವನ್ನು ಯಾರು ಅನು-ಸರಿಸುತ್ತಾನೋ, ಅವರು ಭಯ ಪಡಬೇಕಾಗಿಲ್ಲ; ಅವರು ದುಃಖಿಸಬೇಕಾಗಿಯೂ ಬರುವುದಿಲ್ಲ." [ಕುರ್‌ಆನ್ 2:38]

ವಿಶೇಷವಾಗಿ ಆಯ್ಕೆಮಾಡಿದ ಸಂದೇಶವಾಹಕರ ಮೂಲಕ ಮತ್ತು ಅವರಿಗೆ ಅವತೀರ್ಣಗೊಳಿ-ಸಲಾದ ಗ್ರಂಥಗಳ ಮೂಲಕ ಅಲ್ಲಾಹು ಮಾನವ ಜೀವನದ ಗುರಿಗಳನ್ನು ಅಧಿಕೃತವಾಗಿ ಮತ್ತು ತಾರ್ಕಿಕವಾಗಿ ನಮಗೆ ವಿವರಿಸುತ್ತಾನೆ.

ಸಹೋದರರೇ.... ಪ್ರಶಾಂತ ಮನಸ್ಸಿನಿಂದ ಈ ಶ್ಲೋಕಗಳನ್ನು ಓದೋಣ:

"ನನ್ನನ್ನು ಆರಾಧಿಸುವುದಕ್ಕಾಗಿಯೇ ವಿನಾ ನಾನು ಜಿನ್ನ್‌ಗಳನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿಲ್ಲ. ನಾನು ಅವರಿಂದ ಜೀವನಾಧಾರವ-ನ್ನು ಬಯಸುವುದಿಲ್ಲ. ಅವರು ನನಗೆ ಆಹಾರ ಒದಗಿಸಬೇಕೆಂದೂ ನಾನು ಬಯಸುವುದಿಲ್ಲ. ಖಂಡಿತವಾಗಿಯೂ ಅಲ್ಲಾಹು ಆಹಾರ ಒದಗಿಸುವವನು, ಮಹಾಶಕ್ತಿಶಾಲಿ ಮತ್ತು ಅತಿ ಬಲಿಷ್ಠನಾಗಿದ್ದಾನೆ." [ಕುರ್‌ಆನ್ 51:56-58]

"ಅವರು ಸ್ವತಃ ಅವರ ಬಗ್ಗೆ ಆಲೋಚಿಸುವು

ದಿಲ್ಲವೇ? ಅಲ್ಲಾಹು ಆಕಾಶಗಳನ್ನು, ಭೂಮಿಯನ್ನು ಹಾಗೂ ಅವುಗಳ ಮಧ್ಯೆಯಿರುವುದನ್ನು ಸತ್ಯದೊಂದಿಗೆ ಮತ್ತು ಒಂದು ನಿಶ್ಚಿತ ಅವಧಿಯೊಂದಿಗೆ ಹೊರತು ಸೃಷ್ಟಿಸಿಲ್ಲ. ಖಂಡಿತವಾಗಿಯೂ ಜನರಲ್ಲಿ ಹೆಚ್ಚಿನವರೂ ತಮ್ಮ ಪ್ರಭುವಿನ (ಅಲ್ಲಾಹನ) ಭೇಟಿಯನ್ನು ನಿಷೇಧಿಸು-ವವರಾಗಿದ್ದಾರೆ." [ಕುರ್‌ಆನ್ 30:8]

"ನಿಮ್ಮಲ್ಲಿ ಅತ್ಯುತ್ತಮವಾಗಿ ಕರ್ಮವೆಸಗುವವರು ಯಾರು ಎಂದು ಪರೀಕ್ಷಿಸುವುದಕ್ಕಾಗಿ ಅವನು ಮರಣ ಮತ್ತು ಜೀವನವನ್ನು ಸೃಷ್ಟಿಸಿದನು. ಅವನು ಮಹಾ ಶಕ್ತಿಶಾಲಿ ಮತ್ತು ಅತ್ಯಧಿಕ ಕ್ಷಮಿ-ಸುವವನಾಗಿದ್ದಾನೆ." [ಕುರ್‌ಆನ್ 67:2]

ಸಂಕ್ಷಿಪ್ತವಾಗಿ ಹೇಳುವುದಾದರೆ, ಸೃಷ್ಟಿಕರ್ತನಾದ ಅಲ್ಲಾಹನನ್ನು ಭೇಟಿಯಾಗುವ ಒಂದು ದಿನವಿದೆ; ಮತ್ತು ಆ ದಿನದ ಯಶಸ್ಸಿಗಾಗಿ ಅವನನ್ನು ಮಾತ್ರ ಆರಾಧಿಸುತ್ತಾ ಜೀವಿಸಬೇಕೆಂದು ಅವನು ಜಗತ್ತಿಗೆ ಕರೆ ನೀಡುತ್ತಿದ್ದಾನೆ.

⇐ ವಿಷಯಸೂಚಿ

# ಸಾವಿನ ನಂತರ ಜೀವನವಿದೆ - ಖಂಡಿತ

ಸಹೋದರರೇ... ಒಂದು ಸಣ್ಣ ಹುಲ್ಲು ಕೂಡ ಉದ್ದೇಶವಿಲ್ಲದೆ ಬೆಳೆಯುವುದಿಲ್ಲ. ಅನಾವಶ್ಯ-ಕವಾಗಿ ಒಂದು ಇರುವೆಯನ್ನೂ ಸೃಷ್ಟಿಸಲಾ-ಗಿಲ್ಲ. ಮನುಷ್ಯನೆಂಬ ಅದ್ಭುತ ಸೃಷ್ಟಿಯನ್ನು ವ್ಯರ್ಥವಾಗಿ ಸೃಷ್ಟಿಸಲಾಗಿದೆಯೇ...? ಸಾವಿರಾರು ಯಂತ್ರಗಳಿರುವ ಬೃಹತ್ ಕಾರ್ಖಾನೆಯು ಉದ್ದೇಶವಿಲ್ಲದೆ ನಿರ್ಮಾಣವಾಗುವುದಿಲ್ಲ; ಮತ್ತು ಉದ್ದೇಶವಿಲ್ಲದೆ ಕೆಲಸ ಮಾಡುವುದಿಲ್ಲ. ಅದರ ನಿರ್ಮಾಣಕ್ಕೆ ಸಮರ್ಪಕ ಯೋಜನೆಗಳು ಇರಲೇಬೇಕು.... ಇದೆ... ಖಂಡಿತ ಇದೆ.

ಬೃಹತ್ ಕಾರ್ಖಾನೆಗಳನ್ನು ಸೋಲಿಸುವ ರೀತಿಯಲ್ಲಿ ಸಾವಿರಾರು ವಿಭಿನ್ನ ಕೆಲಸಗಳು ನಡೆಯುತ್ತಿರುವ ಮಾನವ ದೇಹವನ್ನು—ಮಾನವ ಸೃಷ್ಟಿಯನ್ನು—ಮತ್ತು ಕೋಟ್ಯಂತರ ಸಂಖ್ಯೆಯಲ್ಲಿರುವ ಮನುಷ್ಯರನ್ನು ಸೃಷ್ಟಿಕರ್ತನು ಯಾವುದೇ ಉದ್ದೇಶವಿಲ್ಲದೆ ಸೃಷ್ಟಿಸಿದ್ದಾನೆಂದು ಹೇಳಬಹುದೇ? ಮಾನವ ದೇಹಕ್ಕೆ ಜೀವ ಮತ್ತು ಆತ್ಮವನ್ನು ತುಂಬಿದ್ದು ಯಾರು... ನಗುವುದು,

ಅಳುವುದು, ಯೋಚಿಸುವುದು, ಮಾತನಾಡುವುದು, ಕಲಿಯುವುದು, ಕಲಿಸುವುದು, ಕೊಡುವುದು, ಪ್ರೀತಿಸುವುದು, ದ್ವೇಷಿಸುವುದು, ಕೋಪಿಸುವುದು, ಕರುಣೆ ತೋರಿಸುವುದು, ನಂಬುವುದು, ನಂಬದಿರುವುದು, ಸಹಾಯ ಮಾಡುವುದು, ಆಕ್ರಮಣ ಮಾಡುವುದು ಮುಂತಾದ ವಿಭಿನ್ನ ಗುಣಲಕ್ಷಣಗಳಿರುವ ಮಾನವನ ಆತ್ಮವನ್ನು ಸೃಷ್ಟಿಸಿದ್ದು ಯಾರು... ಮನುಷ್ಯನಿಗೆ ಜೀವ ಮತ್ತು ಆತ್ಮವನ್ನು ವ್ಯಾಖ್ಯಾನಿಸಲು ಸಾಧ್ಯವಾಗದೇ ಇರುವುದು ಏಕೆ?

ನಮಗೆ ದೇಹ, ಜೀವ ಮತ್ತು ಆತ್ಮವನ್ನು ನೀಡಿದ ಪ್ರಜ್ಞಾಪೂರ್ವಕವಾಗಿ ನಮ್ಮ ವಿಷಯದಲ್ಲಿ ಮಧ್ಯಪ್ರವೇಶ ಮಾಡುವ ಒಬ್ಬ ಸೃಷ್ಟಿಕರ್ತನಿಲ್ಲ ಎಂದು ಹೇಳಲು ಯಾವುದೇ ಆಧಾರವಿಲ್ಲ.

"ನಾವು ನಿಮ್ಮನ್ನು ಉದ್ದೇಶರಹಿತವಾಗಿ ಸೃಷ್ಟಿಸಿದ್ದೇವೆ ಮತ್ತು ನೀವು ನಮ್ಮ ಬಳಿಗೆ ಮರಳಿ ಬರುವುದಿಲ್ಲ ಎಂದು ನೀವು ಭಾವಿಸಿದ್ದೀರಾ? ನೈಜ ಸಾಮ್ರಾಟನಾಗಿರುವ ಅಲ್ಲಾಹು ಪರಮೋನ್ನತನು. ಅವನ ಹೊರತು ಬೇರೆ ಯಾರೂ ಆರಾಧನೆಗೆ ಅರ್ಹರಲ್ಲ. ಅವನು ಗೌರವಾನ್ವಿತ ಸಿಂಹಾಸನದ ಒಡೆಯನಾಗಿದ್ದಾನೆ.

ಯಾರಾದರೂ ಅಲ್ಲಾಹನೊಂದಿಗೆ ಇತರ ದೇವರುಗಳನ್ನು ಕರೆದು ಪ್ರಾರ್ಥಿಸುವುದಾದರೆ—ಹಾಗೆ ಪ್ರಾರ್ಥಿಸಲು ಅವನ ಬಳಿ ಯಾವುದೇ ಆಧಾರವೂ ಇಲ್ಲ—ಅವನ ವಿಚಾರಣೆಯು ಅವನ ಪ್ರಭುವಿನ ಬಳಿಯಲ್ಲಿದೆ. ನಿಶ್ಚಯವಾಗಿಯೂ ಸತ್ಯನಿಷೇಧಿಗಳು ಯಶಸ್ವಿಯಾಗುವುದಿಲ್ಲ. (ಓ ಪ್ರವಾದಿಯವರೇ!) ಹೇಳಿರಿ: ನನ್ನ ಪ್ರಭೂ! ನನ್ನನ್ನು ಕ್ಷಮಿಸು ಮತ್ತು ನನಗೆ ದಯೆ ತೋರು. ದಯೆ ತೋರುವವರಲ್ಲಿ ನೀನು ಅತ್ಯುತ್ತಮನಾಗಿರುವೆ.” [ಕುರ್‌ಆನ್ 23:115-118]

“ನಾವು ಆಕಾಶವನ್ನು, ಭೂಮಿಯನ್ನು ಮತ್ತು ಅವುಗಳ ಮಧ್ಯೆಯಿರುವವುಗಳನ್ನು ಉದ್ದೇಶವಿಲ್ಲದೆ ಸೃಷ್ಟಿಸಿಲ್ಲ. ಅದು ಸತ್ಯನಿಷೇಧಿಗಳ ಊಹೆಯಾಗಿದೆ. ಆದ್ದರಿಂದ ಸತ್ಯನಿಷೇಧಿಗಳಿಗೆ ನರಕ ಶಿಕ್ಷೆಯ ಮಹಾ ವಿನಾಶ ಕಾದಿದೆ. ಅಥವಾ, ಸತ್ಯವಿಶ್ವಾಸಿಗಳನ್ನು ಮತ್ತು ಸತ್ಕರ್ಮಿಗಳನ್ನು ನಾವು ಭೂಮಿಯಲ್ಲಿ ಕ್ಷೋಭೆಯನ್ನು ಸೃಷ್ಟಿಸುವವರಂತೆ ಮಾಡುವೆವೇ? ಅಥವಾ ಧರ್ಮನಿಷ್ಠರನ್ನು ನಾವು ದುಷ್ಟರಂತೆ ಮಾಡುವೆವೇ?” [ಕುರ್‌ಆನ್ 38:27-28]

⇐ ವಿಷಯಸೂಚಿ

# ಇಸ್ಲಾಂ ಒಳಿತು ಮತ್ತು ಶಾಂತಿಯ ಧರ್ಮವಾಗಿದೆ

ಕೊನೆಯದಾಗಿ, ಕೆಲವು ಮಾತುಗಳನ್ನು ಹೇಳುತ್ತೇನೆ...

ಇಸ್ಲಾಂ ಧರ್ಮವು ಮನುಷ್ಯನನ್ನು ಸೃಷ್ಟಿಸಿದ ದೇವನು ಮೋಕ್ಷದ ಮಾರ್ಗವಾಗಿ ಪರಿಚಯಿಸಿದ ಧರ್ಮವಾಗಿದೆ. ಅಲ್ಲಾಹನ ಶ್ರೇಷ್ಠ ಹೆಸರುಗಳಲ್ಲಿ ಒಂದು “ಅಸ್ಸಲಾಮ್”. ಶಾಂತಿ ಮತ್ತು ಭದ್ರತೆಯನ್ನು ನೀಡುವವನು ಎಂಬುದು ಆ ಹೆಸರಿನ ಅರ್ಥ. ಅದಕ್ಕಾಗಿಯೇ ಅವನು ತನ್ನ ಧರ್ಮಕ್ಕೆ ಇಸ್ಲಾಂ ಎಂದು ಹೆಸರಿಟ್ಟನು. ಇಸ್ಲಾಂ ಎಂದರೆ ಶಾಂತಿ. ಇಸ್ಲಾಂ ಧರ್ಮವು ಮನುಷ್ಯನಿಗೆ ಎಲ್ಲಾ ಅರ್ಥದಲ್ಲೂ ಶಾಂತಿಯನ್ನು ನೀಡುವ ಧರ್ಮವಾಗಿದೆ.

ಶಾಂತಿ ಎಂಬ ಪದವು ಭಯೋತ್ಪಾದನೆಗೆ ಹೊಂದಿಕೆಯಾಗುವುದಿಲ್ಲ ಎಂದಾದರೆ, ಇಸ್ಲಾಂ ಭಯೋತ್ಪಾದನೆಯ ಧರ್ಮವೆಂದು ಕೆಲವರು ಹೇಳುವುದಕ್ಕೆ ಏನು ಅರ್ಥ? ಅದರಲ್ಲಿ ಏನಾದರೊಂದು ದುರುದ್ದೇಶವಿದೆಯೆಂದು ನಿಮಗೆ ಅನಿಸುವುದಿಲ್ಲವೇ?

ತನ್ನ ನಾಲಿಗೆ ಮತ್ತು ಕೈಗಳಿಂದ ಸಂಭವಿಸುವ ಹಾನಿಯಿಂದ ಇತರರಿಗೆ ಸಂರಕ್ಷಣೆ ನೀಡುವವನೇ ನಿಜವಾದ ಮುಸಲ್ಮಾನ ಮತ್ತು ಇತರರ ಆಸ್ತಿ ಮತ್ತು ಜೀವಕ್ಕೆ ಭದ್ರತೆಯನ್ನು ನೀಡುವವನೇ ಸತ್ಯವಿಶ್ವಾಸಿ ಎಂದು ಪ್ರವಾದಿ ಮುಹಮ್ಮದ್(ಸ) ಬೋಧಿಸಿದರು. ಹೀಗಿರುವಾಗ, ಒಬ್ಬ ಮುಸಲ್ಮಾನನನ್ನು ಭಯೋತ್ಪಾದಕ, ಉಗ್ರವಾದಿ ಎಂದು ಕರೆಯುವುದರಲ್ಲಿ ಏನೋ ಗೂಢಾರ್ಥ-ವಿದೆಯೆಂದು ನಿಮಗೆ ತೋರುವುದಿಲ್ಲವೇ?

ಜನರನ್ನು ಕೊಲ್ಲುವವರಲ್ಲಿ ಮುಸ್ಲಿಂ ಹೆಸರುಗಳಿವೆ ಎಂಬ ಕಾರಣಕ್ಕಾಗಿ ಇಸ್ಲಾಂ ಅನ್ನು ಭಯೋತ್ಪಾದನೆಯ ಧರ್ಮ ಎಂದು ಯಾರಾದರೂ ಹೇಳುವಾಗ, ನೀವೊಬ್ಬ ತಿಳು-ವಳಿಕೆಯಿರುವ ವ್ಯಕ್ತಿಯಾಗಿದ್ದರೆ ನೀವು ಖಂಡಿತ ನಗುವಿರಿ ಎಂದು ನನಗೆ ಖಾತ್ರಿಯಿದೆ. ಸಂಗತಿಗಳನ್ನು ಸರಿಯಾಗಿ ಮೌಲ್ಯಮಾಪನ ಮಾಡುವ ವ್ಯಕ್ತಿಗೆ, ಜಗತ್ತಿನಲ್ಲಿ ನಡೆಯುತ್ತಿರುವ ಯಾವುದೇ ರಕ್ತಪಾತಕ್ಕೂ ಇಸ್ಲಾಂ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ; ಹಾಗೆಯೇ ಜಗತ್ತಿನಲ್ಲಿ ಮುಸ್ಲಿಮರಿಗಿಂತ ಮುಸ್ಲಿಮೇತರರೇ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕೊಂದಿದ್ದಾರೆ ಮತ್ತು

ಇನ್ನೂ ಕೊಲ್ಲುತ್ತಿದ್ದಾರೆ ಎಂದು ಮನವರಿಕೆಯಾಗುತ್ತದೆ. ಮೊದಲೇ ಹೇಳಿದಂತೆ, ಯಾವುದೇ ಧರ್ಮದ ಜನರಲ್ಲಿ ಸಜ್ಜನರು ಮತ್ತು ದುರುಳರು ಇರುತ್ತಾರೆ. ಜನರು ಮಾಡುವ ಅಧಾರ್ಮಿಕ ಕೃತ್ಯಗಳೊಂದಿಗೆ ಧರ್ಮಕ್ಕೆ ಯಾವುದೇ ನಂಟಿಲ್ಲ ಎಂಬುದು ಸ್ಪಷ್ಟವಾಗಿದ್ದರೂ, ಯಾವುದೋ ಒಬ್ಬ ಮುಸ್ಲಿಂ ಹೆಸರಿನ ವ್ಯಕ್ತಿ ಮಾಡುವ ಕೃತ್ಯಗಳಿಗೆ ಇಸ್ಲಾಂ ಧರ್ಮವನ್ನು ಹೊಣೆಯಾಗಿಸುವವರಿಗೆ ಕೆಲವು ಗೂಢ ದುರುದ್ದೇಶಗಳಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಒಬ್ಬ ವ್ಯಕ್ತಿಯನ್ನು ಅನ್ಯಾಯವಾಗಿ ಕೊಂದವನು ಇಡೀ ಮನುಕುಲವನ್ನು ಕೊಂದಂತೆ, ಒಬ್ಬನ ಜೀವವನ್ನು ಉಳಿಸಿದರೆ ಅದು ಇಡೀ ಮನುಕುಲದ ಜೀವ ಉಳಿಸಿದಂತೆ (ಕುರ್‌ಆನ್ 5:32) ಎಂದು ಹೇಳುವ ಈ ಧರ್ಮಗ್ರಂಥವನ್ನು ಪಾಲಿಸುವವರು ಯಾರೂ ಕೊಲೆಗುಡುಕರಾಗಲಾರರು....

ಸಹೋದರರೇ.... ಕಣ್ಣಿನಿಂದ ಮಾಡುವ ವಂಚನೆಯನ್ನು ಕೂಡ ನಿಷೇಧಿಸಿದ ಪ್ರವಾದಿಯನ್ನು ನೀವು ಹೇಗೆ ತಪ್ಪಾಗಿ ಅರ್ಥಮಾಡಿಕೊಂಡಿದ್ದೀರಿ ಎಂದು ತಿಳಿಯುತ್ತಿಲ್ಲ... ಯುದ್ಧದ ಸಂದರ್ಭದಲ್ಲಿ ಹೊರತುಪಡಿಸಿ ಇತರ

ಸಂದರ್ಭಗಳಲ್ಲಿ ಯಾರಾದರೂ ಒಬ್ಬ ಮುಸ್ಲಿಮೇತರನನ್ನು ಅನ್ಯಾಯವಾಗಿ ಕೊಂದರೆ ಅವನು ಸ್ವರ್ಗದ ಪರಿಮಳವನ್ನು ಸಹ ಅನುಭವಿಸುವುದಿಲ್ಲ ಎಂದು ಕಲಿಸಿದ ಪ್ರವಾದಿಯನ್ನು ನೀವು ಸರಿಯಾಗಿ ಅಪಾರ್ಥ ಮಾಡಿಕೊಂಡಿದ್ದೀರಿ...

ಹಸಿ ಯಕೃತ್ತಿರುವ ಯಾವುದೇ ಜೀವಿಯೊಂದಿಗೆ ಅನುಕಂಪ ತೋರಿಸುವವನಿಗೆ ಸ್ವರ್ಗವಿದೆ ಎಂದು ಶುಭವಾರ್ತೆ ನೀಡಿದ ಪ್ರವಾದಿಯನ್ನು ಭಯೋತ್ಪಾದನೆಗೆ ಪ್ರೇರಣೆ ನೀಡುವ ಒಂದು ಧರ್ಮದ ನಾಯಕನಂತೆ ಚಿತ್ರಿಸುವ ಅಸಂಬದ್ಧತೆಯನ್ನು ನೀವು ಇನ್ನೂ ನಂಬುತ್ತೀರಾ....?

ಕೋಟ್ಯಂತರ ಮನುಷ್ಯರ ಬದುಕನ್ನು ಹಾಳು ಮಾಡುತ್ತಿರುವ ಮದ್ಯಪಾನ, ಮಾದಕ ವ್ಯಸನ, ವ್ಯಭಿಚಾರ, ಬಡ್ಡಿ, ಜೂಜು ಮುಂತಾದ ಎಲ್ಲ ಅನೈತಿಕ ಚಟುವಟಿಕೆಗಳನ್ನು ನಿಷೇಧಿಸಿದ ಆ ಮಹಾನ್ ವ್ಯಕ್ತಿಯ ಬಗ್ಗೆ ನಿಮಗೇಕೆ ಹೆಮ್ಮೆ ಅನಿಸುವುದಿಲ್ಲ...?

ಅನ್ಯ ಮಹಿಳೆಯರ ಮುಖವನ್ನು ಉದ್ದೇಶವಿಟ್ಟು ನೋಡಬಾರದು ಮತ್ತು ನಿಮಗೆ ಮುಟ್ಟಲು ಅಧಿಕಾರವಿಲ್ಲದ ಮಹಿಳೆಯನ್ನು ಮುಟ್ಟುವುದಕ್ಕಿಂತ

ನಿಮ್ಮ ತಲೆಯ ಮೇಲೆ ಮೊಳೆ ಹೊಡೆಯುವುದು ನಿಮಗೆ ಲೇಸು ಎಂದು ಹೇಳಿಕೊಟ್ಟ ಪ್ರವಾದಿಯ ಬಗ್ಗೆ, ಅಥವಾ ಇಸ್ಲಾಂ ಧರ್ಮದ ಬಗ್ಗೆ ಅದು ಮಹಿಳೆಯರನ್ನು ಅವಮಾನಿಸುವ ಧರ್ಮವೆಂದು ಹೀಯಾಳಿಸುತ್ತಾ ತಿರುಗಾಡುವವರ ಬಗ್ಗೆ ನಿಮಗೆ ಏನನಿಸುತ್ತದೆ? ಪುರುಷರ ಕಾಮ ದೃಷ್ಟಿಗಳು ತಮ್ಮ ಸೌಂದರ್ಯದಿಂದ ಆಕರ್ಷಿತವಾಗದಂತೆ ಸಭ್ಯ ವಸ್ತ್ರಗಳನ್ನು ಧರಿಸಿ ತಮ್ಮ ಸೌಂದರ್ಯವನ್ನು ಇತರರಿಂದ ಮರೆಮಾಡಬೇಕೆಂದು ಇಸ್ಲಾಂ ಬೋಧಿಸುವಾಗ, ಅದು ಮಹಿಳೆಯರ ಸುರಕ್ಷತೆಗೆ ಇಸ್ಲಾಂ ಕೈಗೊಂಡ ಕ್ರಮವೆಂದು ನಾವೇಕೆ ಅರ್ಥ-ಮಾಡಿಕೊಳ್ಳುವುದಿಲ್ಲ? ಅದೂ ಕೂಡ, ದೇಶದಲ್ಲಿ ಪ್ರತಿ ನಿಮಿಷಕ್ಕೆ ಒಬ್ಬ ಮಹಿಳೆ ಕ್ರೂರವಾಗಿ ಲೈಂಗಿಕ ದೌರ್ಜನ್ಯಕ್ಕೊಳಗಾಗುವ ಅಥವಾ ಅತ್ಯಾಚಾರ-ಕ್ಕೊಳಗಾಗಿ ಹತ್ಯೆಯಾಗುವ ಈ ಕಾಲದಲ್ಲಿ?

ನಿಮ್ಮಲ್ಲಿ ಅತ್ಯಂತ ಪರಿಪೂರ್ಣ ವಿಶ್ವಾಸಿ ಅತ್ಯುತ್ತಮ ಗುಣ ನಡವಳಿಕೆಯನ್ನು ಹೊಂದಿರುವವನು ಮತ್ತು ನಿಮ್ಮಲ್ಲಿ ಅತ್ಯುತ್ತಮನು ತನ್ನ ಮಡದಿಯೊಂದಿಗೆ ಗೌರವದಿಂದ ವರ್ತಿಸುವವನು ಎಂದು ಕಲಿಸಿದ ಪ್ರವಾದಿ ವಚನಗಳ ಸೌಂದರ್ಯವನ್ನು ನೀವು ಮೆಚ್ಚದಿರುವುದನ್ನು ಕಂಡು ಅಚ್ಚರಿಯಾಗುತ್ತಿದೆ.

ಮಹಿಳೆಯರಿಗೆ ಹೊಣೆಗಾರಿಕೆಗಳಿರುವಂತೆ ಕೆಲವು ಹಕ್ಕುಗಳೂ ಇವೆ ಎಂದು ಕುರ್‌ಆನ್ ಹೇಳುವಾಗ ಇಸ್ಲಾಂ ಧರ್ಮವನ್ನು ಸ್ತ್ರೀವಿರೋಧಿ ಧರ್ಮವೆಂದು ಹೇಳುವವರನ್ನು ನೀವೇಕೆ ಪ್ರಶ್ನಿಸುವುದಿಲ್ಲ?

ಇಸ್ಲಾಂ ಧರ್ಮದ ಬಗ್ಗೆ ತಪ್ಪುಕಲ್ಪನೆಗಳನ್ನು ಹರಡುವವರು ಯಾವುದೋ ದುರುದ್ದೇಶದಿಂದ ಈ ಹೇಯ ಕೃತ್ಯವನ್ನು ಮಾಡುತ್ತಿದ್ದಾರೆ ಎಂದು ನಾವು ಅರ್ಥಮಾಡಿಕೊಳ್ಳಬೇಕು.

ಹೌದು ಸಹೋದರರೇ... ನಿಮ್ಮಂತಹ ಪ್ರಾಮಾಣಿಕರು ಇಸ್ಲಾಂ ಧರ್ಮವನ್ನು ಅರ್ಥ ಮಾಡಿಕೊಳ್ಳಬಾರದು ಮತ್ತು ಒಳಿತಿನ ದಾರಿಯನ್ನು ಸ್ವೀಕರಿಸಬಾರದು; ನಿಮ್ಮಂತಹವರು ಇಸ್ಲಾಂ ಮುಂದಿಡುವ ಅಮೂಲ್ಯ ಜೀವನಶೈ-ಲಿಯನ್ನು ಸ್ವೀಕರಿಸಿದರೆ, ಅದರಿಂದ ತಮಗೆ ನಷ್ಟವಿದೆ ಎಂದು ನಂಬಿರುವ ಅಂಧಕಾರದ ಶಕ್ತಿಗಳು ಹಬ್ಬಿಸುವ ಕೆಲವು ಸುಳ್ಳು ಕಥೆಗಳೇ ಇಸ್ಲಾಂ ವಿರುದ್ಧದ ಟೀಕೆಗಳು ಎಂದು ನಾವು ಅರ್ಥಮಾಡಿಕೊಳ್ಳಬೇಕು.

ಇಸ್ಲಾಂ ಮನುಷ್ಯನಿಗೆ ಕಲಿಸುವ ಕೆಲವು ಅಪೂರ್ವ ಉಪದೇಶಗಳನ್ನು ನಾನು ನಿಮಗೆ

ತಿಳಿಸುತ್ತೇನೆ. ಅಧ್ಯಾಯ ಮತ್ತು ಶ್ಲೋಕದ ಸಂಖ್ಯೆಯನ್ನು ನೀಡುತ್ತೇನೆ. ನೀವೇ ಅವುಗಳ ಬಗ್ಗೆ ಮೌಲ್ಯಮಾಪನ ಮಾಡಿ ನೋಡಿರಿ.

“ನೀವು ಅವನ ಹೊರತು ಬೇರೆ ಯಾರನ್ನೂ ಆರಾಧಿಸಬಾರದು ಮತ್ತು ಮಾತಾಪಿತರಿಗೆ ಒಳಿತನ್ನು ಮಾಡಬೇಕು ಎಂದು ನಿಮ್ಮ ಪ್ರಭು ನಿರ್ಧರಿಸಿದ್ದಾನೆ. ಅವರಲ್ಲಿ (ಮಾತಾಪಿತರಲ್ಲಿ) ಒಬ್ಬರು ಅಥವಾ ಇಬ್ಬರೂ ನಿಮ್ಮ ಉಪಸ್ಥಿತಿಯಲ್ಲಿ ವೃದ್ಧಾಪ್ಯವನ್ನು ತಲುಪಿದರೆ ಅವರೊಂದಿಗೆ “ಛೆ” ಎಂಬ ಮಾತನ್ನು ಕೂಡ ಹೇಳಬೇಡಿ; ಅವರನ್ನು ಗದರಿಸಬೇಡಿ; ಅವರಿಗೆ ಗೌರವದ ಮಾತುಗಳ-ನ್ನಷ್ಟೇ ಹೇಳಿರಿ. ಕರುಣೆಯಿಂದಿರುವ ವಿನಯದ ರೆಕ್ಕೆಯನ್ನು ಅವರಿಬ್ಬರಿಗೂ ತಗ್ಗಿಸಿಕೊಡಿರಿ ಮತ್ತು ನನ್ನ ಪ್ರಭೂ! ಚಿಕ್ಕಂದಿನಲ್ಲಿ ಇವರಿಬ್ಬರು ನನ್ನನ್ನು ಸಾಕಿ ಸಲಹಿದಂತೆ ಅವರಿಗೆ ದಯೆ ತೋರು ಎಂದು ಪ್ರಾರ್ಥಿಸಿರಿ. ನಿಮ್ಮ ಮನಸ್ಸುಗಳಲ್ಲಿರು-ವುದನ್ನು ನಿಮ್ಮ ಪ್ರಭು ಚೆನ್ನಾಗಿ ತಿಳಿಯುತ್ತಾನೆ. ನೀವು ಸಜ್ಜನರಾಗಿದ್ದರೆ, ಪಶ್ಚಾತ್ತಾಪಪಟ್ಟು ಮರಳುವವರಿಗೆ ಖಂಡಿತವಾಗಿಯೂ ಅವನು ಅತ್ಯಧಿಕ ಕ್ಷಮಿಸುತ್ತಾನೆ. ಆಪ್ತ ಸಂಬಂಧಿಕರಿಗೆ ಅವರ ಹಕ್ಕನ್ನು ನೀಡಿರಿ. ನಿರ್ಗತಿಕರಿಗೂ,

ದಾರಿಹೋಕರಿಗೂ (ಅವರ ಹಕ್ಕನ್ನು ನೀಡಿರಿ). ದುಂದುಗಾರಿಕೆ ಮಾಡಬೇಡಿ. ಖಂಡಿತವಾಗಿಯೂ ದುಂದುಗಾರಿಕೆ ಮಾಡುವವರು ಸೈತಾನನ ಸಹೋದರರಾಗಿದ್ದಾರೆ. ಸೈತಾನನು ತನ್ನ ಪ್ರಭುವಿನೊಂದಿಗೆ ಅತ್ಯಧಿಕ ಕೃತಘ್ನನಾಗಿ-ದ್ದಾನೆ. ನೀವು ನಿಮ್ಮ ಪ್ರಭುವಿನಿಂದ ನಿರೀಕ್ಷಿಸು-ತ್ತಿರುವ ಅನುಗ್ರಹವನ್ನು ಅರಸುತ್ತಾ ಅವರಿಂದ (ಜನರಿಂದ) ವಿಮುಖನಾಗಬೇಕಾಗಿ ಬಂದರೆ ಅವರೊಂದಿಗೆ ಸೌಮ್ಯವಾದ ಮಾತುಗಳನ್ನಾ-ಡಿರಿ. ನೀವು ನಿಮ್ಮ ಕೈಯನ್ನು ನಿಮ್ಮ ಕೊರಳಿಗೆ ಕಟ್ಟಬೇಡಿ (ಜಿಪುಣತನ ತೋರಬೇಡಿ); ಅಥವಾ ಅದನ್ನು ಸಂಪೂರ್ಣವಾಗಿ ಚಾಚಬೇಡಿ (ಅಮಿತವಾಗಿ ವ್ಯಯಿಸಬೇಡಿ). ಹಾಗೇನಾದರೂ ಮಾಡಿದರೆ ನೀವು ದೂಷಿಸಲ್ಪಟ್ಟವರೂ ಕಷ್ಟ-ಪಡುವವರೂ ಆಗುವಿರಿ. ಖಂಡಿತವಾಗಿಯೂ ನಿಮ್ಮ ಪ್ರಭು ಅವನಿಚ್ಛಿಸುವವರಿಗೆ ಜೀವನಾ-ಧಾರವನ್ನು ವಿಶಾಲಗೊಳಿಸುತ್ತಾನೆ ಮತ್ತು (ಅವನಿಚ್ಛಿಸುವವರಿಗೆ) ಸಂಕುಚಿತಗೊಳಿಸು-ತ್ತಾನೆ. ಖಂಡಿತವಾಗಿಯೂ ಅವನು ತನ್ನ ದಾಸರ ಬಗ್ಗೆ ಸೂಕ್ಷ್ಮವಾಗಿ ವೀಕ್ಷಿಸುವವನಾಗಿ-ದ್ದಾನೆ. ಬಡತನವನ್ನು ಹೆದರಿ ನಿಮ್ಮ ಮಕ್ಕಳನ್ನು ಹತ್ಯೆ ಮಾಡಬೇಡಿ. ಅವರಿಗೂ, ನಿಮಗೂ

ಆಹಾರ ಒದಗಿಸುವವರು ನಾವು. ಅವರನ್ನು ಹತ್ಯೆ ಮಾಡುವುದು ಖಂಡಿತವಾಗಿಯೂ ಮಹಾ ಅಪರಾಧವಾಗಿದೆ. ನೀವು ವ್ಯಭಿಚಾರದ ಹತ್ತಿರಕ್ಕೂ ಸುಳಿಯಬೇಡಿ. ಖಂಡಿತವಾಗಿಯೂ ಅದು ನೀಚಕೃತ್ಯವೂ, ಕೆಟ್ಟಮಾರ್ಗವೂ ಆಗಿದೆ. ಅಲ್ಲಾಹು ಪವಿತ್ರಗೊಳಿಸಿದ ಯಾವುದೇ ಜೀವವನ್ನು ಅನ್ಯಾಯವಾಗಿ ಹತ್ಯೆ ಮಾಡಬೇಡಿ. ಯಾರಾದರೂ ಅನ್ಯಾಯವಾಗಿ ಹತ್ಯೆಗೀಡಾದರೆ ಅವನ ಹಕ್ಕುದಾರನಿಗೆ ನಾವು (ಪ್ರತೀಕಾರದ) ಅಧಿಕಾರವನ್ನು ನೀಡಿದ್ದೇವೆ. ಆದರೆ ಅವನು ಕೊಲೆಯಲ್ಲಿ ಹದ್ದುಮೀರ-ಬಾರದು. ಖಂಡಿತವಾಗಿಯೂ ಅವನು ಸಹಾಯ ಮಾಡಲ್ಪಟ್ಟವನಾಗಿರುವನು. ಅನಾಥನು ಪ್ರೌಢನಾಗುವ ತನಕ ಅತ್ಯುತ್ತಮ ವಿಧದಲ್ಲೇ ಹೊರತು ಅವನ ಸಂಪತ್ತಿನ ಬಳಿಗೆ ಹೋಗಬೇಡಿ (ಅವನ ಸಂಪತ್ತನ್ನು ಬಳಸಬೇಡಿ). ಕರಾರನ್ನು ಈಡೇರಿಸಿರಿ. ಖಂಡಿತವಾಗಿಯೂ ಕರಾರಿನ ಬಗ್ಗೆ ವಿಚಾರಣೆ ಮಾಡಲಾಗುವುದು. ನೀವು ಅಳೆದುಕೊಡುವಾಗ ಅಳತೆಯನ್ನು ಪೂರ್ಣವಾಗಿ ಕೊಡಿ. ಸರಿಯಾದ ತಕ್ಕಡಿಯಿಂದಲೇ ತೂಕ ಮಾಡಿ. ಅದು ಅತ್ಯುತ್ತಮವಾಗಿದೆ ಮತ್ತು ಅಂತ್ಯಫಲದ ವಿಷಯದಲ್ಲೂ ಅತಿ ಶ್ರೇಷ್ಠವಾಗಿದೆ.

ತಮಗೆ ತಿಳುವಳಿಕೆಯಿಲ್ಲದ ಯಾವುದನ್ನೂ ತಾವು ಹಿಂಬಾಲಿಸಬೇಡಿ. ಖಂಡಿತವಾಗಿಯೂ ಶ್ರವಣ, ದೃಷ್ಟಿ ಮತ್ತು ಹೃದಯ, ಇವೆಲ್ಲವೂ ವಿಚಾರಣೆಗೆ ಒಳಗಾಗುವುದು. ಭೂಮಿಯಲ್ಲಿ ದರ್ಪದಿಂದ ನಡೆಯಬೇಡಿ. ಖಂಡಿತವಾಗಿಯೂ ಭೂಮಿಯನ್ನು ಸೀಳುವುದಾಗಲಿ, ಎತ್ತರದಲ್ಲಿ ಪರ್ವತದ ಸಮಾನಕ್ಕೆ ತಲುಪುವುದಾಗಲಿ ನಿಮ್ಮಿಂದ ಸಾಧ್ಯವಿಲ್ಲ. ಇವೆಲ್ಲವೂ (ನಿಷೇ-ಧಿಸಲಾಗಿದ್ದು) ಅವುಗಳ ಕೆಡುಕು ನಿಮ್ಮ ಪ್ರಭುವಿನ ಬಳಿ ಅಸಹ್ಯಕರವಾಗಿದೆ. ಇದು ನಿಮ್ಮ ಪ್ರಭು ನಿಮಗೆ ದಿವ್ಯವಾಣಿಯ ಮೂಲಕ ನೀಡಿದ ಜ್ಞಾನದಲ್ಲಿ ಸೇರಿದ್ದಾಗಿದೆ. ನೀವು ಅಲ್ಲಾಹನೊಂದಿಗೆ ಬೇರೆ ದೇವರುಗಳನ್ನು ಆರಾಧಿಸಬೇಡಿ. ಹಾಗೇನಾದರೂ ಮಾಡಿದರೆ ನೀವು ಆಕ್ಷೇಪಾರ್ಹರೂ ಬಹಿಷ್ಕೃತರೂ ಆಗಿ ನರಕಾಗ್ನಿಯಲ್ಲಿ ಎಸೆಯಲ್ಪಡುವಿರಿ.” [ಕುರ್‌ಆನ್ 17:23-39]

“ಓ ಸತ್ಯವಿಶ್ವಾಸಿಗಳೇ! ಮದ್ಯ, ಜೂಜಾಟ, ಪ್ರ-ತಿಷ್ಠಾಪನೆಗಳು ಮತ್ತು ಭಾಗ್ಯ ಪರೀಕ್ಷಿಸುವ ಬಾಣಗಳು ಪೈಶಾಚಿಕವಾದ ನೀಚಕೃತ್ಯಗ-ಳಾಗಿವೆ. ಆದ್ದರಿಂದ ನೀವು ಅವೆಲ್ಲವನ್ನೂ

ವರ್ಜಿಸಿರಿ. ನೀವು ಯಶಸ್ವಿಯಾಗಲೂಬಹುದು. ಮದ್ಯ ಮತ್ತು ಜೂಜಾಟದ ಮೂಲಕ ನಿಮ್ಮ ಮಧ್ಯೆ ಶತ್ರುತ್ವ ಹಾಗೂ ವಿದ್ವೇಷವನ್ನು ಬಿತ್ತಲು ಮತ್ತು ಅಲ್ಲಾಹನ ಸ್ಮರಣೆ ಹಾಗೂ ನಮಾಝ್‌ನಿಂದ ನಿಮ್ಮನ್ನು ತಡೆಯಲು ಸೈತಾನನು ಇಚ್ಛಿಸುತ್ತಾನೆ. ಆದ್ದರಿಂದ ನೀವು (ಅವುಗಳಿಂದ) ದೂರವಾಗಲು ಸಿದ್ಧರಿದ್ದೀರಾ?" [ಕುರ್‌ಆನ್ 5:90-91]

"ಖಂಡಿತವಾಗಿಯೂ ಅಲ್ಲಾಹು ನ್ಯಾಯ ಪಾಲಿಸಲು, ಒಳಿತು ಮಾಡಲು ಮತ್ತು ಸಂಬಂಧಿಕರಿಗೆ (ನೆರವು) ನೀಡಲು ಆಜ್ಞಾಪಿಸುತ್ತಾನೆ. ನೀಚಕೃತ್ಯಗಳನ್ನು, ದುರಾಚಾರಗಳನ್ನು ಮತ್ತು ಅತಿರೇಕಗಳನ್ನು ವಿರೋಧಿಸುತ್ತಾನೆ. ನೀವು ಆಲೋಚಿಸಿ ತಿಳಿಯುವ ಸಲುವಾಗಿ ಅವನು ನಿಮಗೆ ಉಪದೇಶ ನೀಡುತ್ತಿದ್ದಾನೆ." [ಕುರ್‌ಆನ್ 16:90]

"ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗೆ ಸಾಕ್ಷಿಗಳಾಗಿರುತ್ತಾ ದೃಢವಾಗಿ ನಿಂತು ನ್ಯಾಯ ಪಾಲಿಸಿರಿ. ಅದು ಸ್ವತಃ ನಿಮಗೆ ಅಥವಾ ನಿಮ್ಮ ಮಾತಾಪಿತರಿಗೆ ಅಥವಾ ನಿಕಟ ಸಂಬಂಧಿಕರಿಗೆ ವಿರುದ್ಧವಾಗಿದ್ದರೂ ಸರಿ. (ನ್ಯಾಯಬೇಡುವವನು) ಧನಿಕನಾಗಿದ್ದರೂ ಬಡವನಾಗಿದ್ದರೂ ಅವರಿಬ್ಬರಿಗೂ

ಅತ್ಯಂತ ಹತ್ತಿರದಲ್ಲಿರುವವನು ಅಲ್ಲಾಹನಾಗಿದ್ದಾನೆ. ಆದ್ದರಿಂದ ನೀವು ನ್ಯಾಯಯಾಗಿ ವರ್ತಿಸದೆ ಸ್ವೇಚ್ಛೆಗಳನ್ನು ಹಿಂಬಾಲಿಸಬೇಡಿ. ನೀವು (ನ್ಯಾಯವನ್ನು) ತಿರುಚುವುದೋ, (ಸಾಕ್ಷಿ ಹೇಳದೆ) ಹಿಂದೆ ಸರಿಯುವುದೋ ಮಾಡಿದರೆ ಖಂಡಿತವಾಗಿಯೂ ನೀವು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹು ಸೂಕ್ಷ್ಮವಾಗಿ ತಿಳಿಯುವವನಾಗಿದ್ದಾನೆ." [ಕುರ್‌ಆನ್ 4:135]

"ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗಾಗಿ ಸ್ಥಿರವಾಗಿ ನಿಂತವರು ಮತ್ತು ನ್ಯಾಯಕ್ಕೆ ಸಾಕ್ಷಿಯಾಗಿರುವವರಾಗಿರಿ. ಒಂದು ಜನಸಮೂಹದೊಂದಿಗೆ ನಿಮಗಿರುವ ಕೋಪವು ಅವರೊಡನೆ ನ್ಯಾಯ ಪಾಲಿಸದಂತೆ ನಿಮ್ಮನ್ನು ಪ್ರೇರೇಪಿಸದಿರಲಿ. ನ್ಯಾಯ ಪಾಲಿಸಿರಿ. ಅದು ಧರ್ಮನಿಷ್ಠೆಗೆ ಅತ್ಯಂತ ನಿಕಟವಾಗಿದೆ. ನೀವು ಅಲ್ಲಾಹನನ್ನು ಭಯಪಡಿರಿ. ಖಂಡಿತವಾಗಿಯೂ ನೀವು ಮಾಡುತ್ತಿರುವುದನ್ನು ಅಲ್ಲಾಹು ಸೂಕ್ಷ್ಮವಾಗಿ ತಿಳಿಯುವವನಾಗಿದ್ದಾನೆ." [ಕುರ್‌ಆನ್ 5:8]

"ಒಳಿತು ಮತ್ತು ಕೆಡುಕು ಸಮಾನವಲ್ಲ. ಅತ್ಯುತ್ತಮವಾದುದು ಯಾವುದೋ ಅದರ ಮೂಲಕ ನೀವು (ಕೆಡುಕನ್ನು) ತಡೆಗಟ್ಟಿರಿ. ಆಗ ಯಾರಿಗೆ

ನಿಮ್ಮೊಡನೆ ದ್ವೇಷವಿದೆಯೋ ಅವನು ನಿಮ್ಮ ಆಪ್ತ ಮಿತ್ರನೆಂಬಂತೆ ಮಾರ್ಪಡುವನು. ತಾಳ್ಮೆ ವಹಿಸಿದವರಿಗೇ ಹೊರತು ಅದಕ್ಕಿರುವ ಅನುಗ್ರ-ಹವನ್ನು ನೀಡಲಾಗುವುದಿಲ್ಲ. ಮಹಾಭಾಗ್ಯವಂ-ತರಿಗೇ ಹೊರತು ಅದಕ್ಕಿರುವ ಅನುಗ್ರಹವನ್ನು ನೀಡಲಾಗುವುದಿಲ್ಲ." [ಕುರ್‌ಆನ್ 41:34-35]

"ಧರ್ಮದ ವಿಷಯದಲ್ಲಿ ನಿಮ್ಮೊಂದಿಗೆ ಯುದ್ಧ ಮಾಡದವರು ಮತ್ತು ನಿಮ್ಮನ್ನು ನಿಮ್ಮ ಮನೆಗಳಿಂದ ಹೊರಗಟ್ಟದವರು ಯಾರೋ ಅವರಿಗೆ ನೀವು ಒಳಿತು ಮಾಡುವುದನ್ನು ಮತ್ತು ಅವರೊಂದಿಗೆ ನ್ಯಾಯಯುತವಾಗಿ ವರ್ತಿಸುವು-ದನ್ನು ಅಲ್ಲಾಹು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ಅಲ್ಲಾಹು ನ್ಯಾಯವಾಗಿ ವರ್ತಿಸುವವರನ್ನು ಇಷ್ಟಪಡುತ್ತಾನೆ." [ಕುರ್‌ಆನ್ 60:8]

"ಅಲ್ಲಾಹು ನಿನಗೆ ಒಳ್ಳೆಯದು ಮಾಡಿದಂತೆ ನೀನು ಜನರಿಗೂ ಒಳ್ಳೆಯದು ಮಾಡು. ಭೂಮಿಯಲ್ಲಿ ಕ್ಷೋಭೆ ಹಚ್ಚಬೇಡ. ಕ್ಷೋಭೆ ಹಚ್ಚು-ವವರನ್ನು ಖಂಡಿತವಾಗಿಯೂ ಅಲ್ಲಾಹು ಇಷ್ಟಪ-ಡುವುದಿಲ್ಲ." [ಕುರ್‌ಆನ್ 28:77]

ಸಹೋದರರೇ... ಮೇಲಿನ ಶ್ಲೋಕಗಳಲ್ಲಿರುವ ಒಳ್ಳೆಯ ಆಶಯಗಳು ಮತ್ತು ಅವುಗಳ-ಲ್ಲಿರುವ ಮಾನವೀಯ ಮೌಲ್ಯಗಳು ಯಾವುದೇ ವಿವರಣೆಯ ಅಗತ್ಯವಿಲ್ಲದೇ ನಿಮಗೆ ಸ್ಪಷ್ಟವಾ-ಗಿರಬಹುದು... ಪ್ರವಾದಿಯನ್ನು ಕಳುಹಿಸುವ ಉದ್ದೇಶವು ಧರ್ಮದ ಸಂಸ್ಥಾಪನೆ ಮತ್ತು ಅಧರ್ಮದ ನಿವಾರಣೆಯಾಗಿದೆ.

“(ಅಂದರೆ) ತಮ್ಮ ಬಳಿಯಿರುವ ತೋರ ಮತ್ತು ಸುವಾರ್ತೆಗಳಲ್ಲಿ ಪ್ರಸ್ತಾಪಿಸಲ್ಪಟ್ಟದ್ದಾಗಿ ಕಾಣುವ ಅನಕ್ಷರಸ್ಥ ಪ್ರವಾದಿಯಾದ ಈ ಸಂದೇಶವಾಹ-ಕರನ್ನು (ಪ್ರವಾದಿ ಮುಹಮ್ಮದ್‌ರನ್ನು) ಅನು-ಸರಿಸುವವರಿಗೆ. ಆ ಪ್ರವಾದಿಯು ಅವರಿಗೆ ಒಳ್ಳೆಯದನ್ನು ಆದೇಶಿಸುತ್ತಾರೆ ಮತ್ತು ಕೆಟ್ಟದ್ದನ್ನು ವಿರೋಧಿಸುತ್ತಾರೆ. ಅವರಿಗೆ ಶುದ್ಧ ವಸ್ತುಗಳನ್ನು ಅನುಮತಿಸುತ್ತಾರೆ ಮತ್ತು ಕೆಟ್ಟ ವಸ್ತುಗಳನ್ನು ನಿಷೇಧಿಸುತ್ತಾರೆ. ಅವರ ಭಾರಗಳನ್ನು ಮತ್ತು ಅವರ ಮೇಲಿದ್ದ ಸಂಕೋಲೆಗಳನ್ನು ಕೆಳಗಿ-ಳಿಸುತ್ತಾರೆ. ಆದ್ದರಿಂದ ಆ ಪ್ರವಾದಿಯನ್ನು ನಂಬುವವರು, ಬೆಂಬಲಿಸುವವರು, ಸಹಾಯ ಮಾಡುವವರು ಮತ್ತು ಅವರಿಗೆ ಅವತೀರ್ಣವಾದ ಬೆಳಕನ್ನು (ಕುರ್‌ಆನನ್ನು) ಅನುಸರಿಸುವವರು

ಯಾರೋ ಅವರೇ ಯಶಸ್ವಿಯಾದವರು." [ಕುರ್‌ಆನ್ 7:157]

ಸಹೋದರರರೇ... ಯಶಸ್ವಿಯಾದವರಲ್ಲಿ ನಾವೂ ಸೇರಬೇಡವೇ?

ಸೇರಬೇಕು... ಅದಕ್ಕಾಗಿ ನಾವು ಆ ಪ್ರವಾದಿಯಲ್ಲಿ (ಮುಹಮ್ಮದ್(ಸ) ರಲ್ಲಿ) ಮತ್ತು ಅವರು ತಂದ ಧರ್ಮಗ್ರಂಥದಲ್ಲಿ (ಕುರ್‌ಆನಿನಲ್ಲಿ) ವಿಶ್ವಾಸವಿಡಬೇಕು.

ನಾವು ಅದರಲ್ಲಿ ವಿಶ್ವಾಸವಿಡದಿದ್ದರೆ, ಮರಣಾನಂತರದ ಜೀವನದಲ್ಲಿ ನಾವು ಸೋತು ನರಕವಾಸಿಗಳಾಗುವೆವು. ವಿಶ್ವಾಸವಿಟ್ಟರೆ ಗೆದ್ದು ಸ್ವರ್ಗವಾಸಿಗಳಾಗುವೆವು. ಅಲ್ಲಾಹು ಹೇಳುವುದನ್ನು ನೋಡಿ.

"ಆದ್ದರಿಂದ ವಿಶ್ವಾಸವಿಟ್ಟವರು ಮತ್ತು ಸತ್ಕರ್ಮ ಮಾಡಿದವರು ಯಾರೋ ಅವರು ಸುಖಾನುಗ್ರಹಗಳು ತುಂಬಿದ ಸ್ವರ್ಗೋದ್ಯಾನಗಳಲ್ಲಿರುವರು. ವಿಶ್ವಾಸವಿಡದವರು ಮತ್ತು ನಮ್ಮ ದೃಷ್ಟಾಂತಗಳನ್ನು ನಿಷೇಧಿಸಿದವರು ಯಾರೋ ಅವರಿಗೆ ಅವಮಾನಕರ ಶಿಕ್ಷೆಯಿರುವುದು." [ಕುರ್‌ಆನ್ 22:56-57]

ಸಹೋದರರೇ... ಸಾವಿನ ನಂತರ ಜೀವನವಿಲ್ಲ ಎಂದು ನೀವು ಭಾವಿಸುತ್ತೀರಾ? ಒಬ್ಬ ಉತ್ತಮ ಆಡಳಿತಗಾರ ತನ್ನ ಪ್ರಜೆಗಳೊಡನೆ ನ್ಯಾಯಯುತವಾಗಿ ವರ್ತಿಸುತ್ತಾನೆ ಎಂದು ನಿಮಗೆ ನಂಬಿಕೆಯಿದ್ದರೆ, ಈ ಮಹಾ ಪ್ರಪಂಚದ ಸೃಷ್ಟಿಕರ್ತನು ತನ್ನ ಸೃಷ್ಟಿಗಳೊಡನೆ ನ್ಯಾಯಯುತವಾಗಿ ವರ್ತಿಸಲಾರನೇ? ಭೂಮಿಯ ಮೇಲೆ ನಡೆಯುತ್ತಿರುವ ಅನ್ಯಾಯ ಮತ್ತು ದೌರ್ಜನ್ಯಗಳಿಗೆ ಲೆಕ್ಕವಿದೆಯೇ? ಅಮಾಯಕರಿಗೆ ನ್ಯಾಯ ಸಿಗಬೇಡವೇ? ಅಪರಾಧಿಗಳಿಗೆ ಶಿಕ್ಷೆಯಾಗಬೇಡವೇ?

ಹೌದು ಎಂದು ಮನಸ್ಸು ಹೇಳುತ್ತದೆ. ಹಾಗಾದರೆ ಭಯಪಡಬೇಡಿ. ಅಂತಹ ಜಗತ್ತು ನಿಜವಾಗಿಯೂ ಇದೆ. ನಮಗೆ ಜೀವವನ್ನು ನೀಡಿ ನಂತರ ನಮ್ಮನ್ನು ಸಾಯಿಸಿದ ಸೃಷ್ಟಿಕರ್ತನಿಗೆ ಪುನಃ ನಮಗೆ ಜೀವ ನೀಡಲು ಕಷ್ಟವಾಗಲಾರದು. ಇದೊಂದು ಸರಳ ತರ್ಕವಾಗಿದೆ. ಅಲ್ಲಾಹು ಅದನ್ನು ಬಹಳ ಸುಂದರವಾಗಿ ವಿವರಿಸುವುದು ನೋಡಿ:

“ನಾವು ಮನುಷ್ಯನನ್ನು ವೀರ್ಯದಿಂದ ಸೃಷ್ಟಿಸಿದ್ದೇವೆಂದು ಅವನು (ಮನುಷ್ಯನು)

ನೋಡುವುದಿಲ್ಲವೇ? ಆದರೂ ಅವನು (ನಮಗೆ) ಸ್ಪಷ್ಟ ಎದುರಾಳಿಯಾಗಿ ಮಾರ್ಪಟ್ಟಿದ್ದಾನೆ. ಅವನು ನಮಗೊಂದು ಉದಾಹರಣೆಯನ್ನು ನೀಡಿದ್ದಾನೆ ಮತ್ತು ತನ್ನ ಸೃಷ್ಟಿಯನ್ನೇ ಮರೆತಿದ್ದಾನೆ. ಅವನು ಕೇಳುತ್ತಾನೆ: "ಕೊಳೆತ ಮೂಳೆಗಳಿಗೆ ಜೀವ ನೀಡಲು ಯಾರಿಗೆ ಸಾಧ್ಯ?" ಹೇಳಿರಿ: "ಅದನ್ನು ಮೊದಲ ಬಾರಿ ಸೃಷ್ಟಿಸಿದವನು ಯಾರೋ ಅವನೇ ಅದಕ್ಕೆ ಜೀವವನ್ನು ನೀಡುವನು. ಅವನು ಸಕಲ ಸೃಷ್ಟಿಗಳ ಬಗ್ಗೆ ಜ್ಞಾನವುಳ್ಳವನಾಗಿದ್ದಾನೆ. ಅವನು ನಿಮಗೆ ಹಸಿ ಮರದಿಂದ ಬೆಂಕಿಯನ್ನು ನಿರ್ಮಿಸಿ-ಕೊಟ್ಟಿದ್ದಾನೆ. ಆಗ ಅಗೋ! ನೀವು ಅದರಿಂದ ಬೆಂಕಿ ಉರಿಸುತ್ತೀರಿ. ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನಿಗೆ ಅವರನ್ನು ಪುನಃ ಸೃಷ್ಟಿಸುವ ಸಾಮರ್ಥ್ಯವಿಲ್ಲವೇ? ಹೌದು! ಅವನು ಎಲ್ಲವನ್ನೂ ಸೃಷ್ಟಿಸುವವನು ಮತ್ತು ಎಲ್ಲವನ್ನೂ ತಿಳಿದವನು. ಅವನು ಒಂದು ವಸ್ತುವನ್ನು ಸೃಷ್ಟಿಸಲು ಬಯಸಿದರೆ, ಅದರೊಂದಿಗೆ "ಉಂಟಾಗು" ಎಂದು ಆಜ್ಞಾಪಿಸುತ್ತಾನೆ. ತಕ್ಷಣ ಅದು ಉಂಟಾಗುತ್ತದೆ! ಎಲ್ಲ ವಸ್ತುಗಳ ಪರಮಾಧಿಕಾರವು ಯಾರ ಕೈಯ್ಯಲ್ಲಿದೆಯೋ ಮತ್ತು ಯಾರೆಡೆಗೆ ನಿಮ್ಮನ್ನು ಮರಳಿಸಲಾಗು-ವುದೋ ಅವನು ಪರಮ ಪರಿಶುದ್ಧನಾಗಿದ್ದಾನೆ!"

[ಕುರ್‌ಆನ್ 36:77-83]

ಇದನ್ನೇ ಇನ್ನೊಂದು ಶೈಲಿಯಲ್ಲಿ ಹೇಳಿರುವುದು ನೋಡಿ:

“ಓ ಜನರೇ! ನಿಮಗೆ ಪುನರುತ್ಥಾನದ (ಮರಣಾನಂತರ ಜೀವನದ) ಬಗ್ಗೆ ಸಂದೇಹವಿದ್ದರೆ (ಈ ಉದಾಹರಣೆಯನ್ನು ಗಮನವಿಟ್ಟು ಕೇಳಿ). ಖಂಡಿತವಾಗಿಯೂ ನಾವು ನಿಮ್ಮನ್ನು ಮಣ್ಣಿನಿಂದ, ನಂತರ ವೀರ್ಯದಿಂದ, ನಂತರ ರಕ್ತಪಿಂಡದಿಂದ, ನಂತರ ರೂಪ ನೀಡಲಾದ ಮತ್ತು ರೂಪ ನೀಡದ ಮಾಂಸ ಮುದ್ದೆಯಿಂದ ಸೃಷ್ಟಿಸಿದೆವು. ನಾವು ನಿಮಗೆ ವಿವರಿಸಿಕೊಡುವ ಸಲುವಾಗಿ (ಇದನ್ನು ಹೇಳುತ್ತಿದ್ದೇವೆ). (ನಂತರ) ನಾವು ಬಯಸುವ ಒಂದು ನಿಶ್ಚಿತ ಅವಧಿಯ ತನಕ ನಾವು ಅದನ್ನು ಗರ್ಭಾಶಯಗಳಲ್ಲಿಡುವೆವು. ನಂತರ ನಾವು ನಿಮ್ಮನ್ನು ಶಿಶುವಾಗಿ ಹೊರತರುವೆವು. ನಂತರ ನೀವು ನಿಮ್ಮ ಪೂರ್ಣಶಕ್ತಿಯನ್ನು ತಲುಪುವವರೆಗೆ (ನಿಮ್ಮನ್ನು ಬೆಳೆಸುವೆವು). ನಿಮ್ಮಲ್ಲಿ (ಬೇಗನೇ) ಸಾಯುವವರಿದ್ದಾರೆ. ತಿಳುವಳಿಕೆ ಪಡೆದ ಬಳಿಕ ಏನೂ ತಿಳಿಯದ ಅತ್ಯಂತ ದುರ್ಬಲ ಪ್ರಾಯದ ತನಕ ಮುಂದೂಡಲಾಗುವವರೂ ಇದ್ದಾರೆ. ಭೂಮಿಯು ಒಣಗಿ ಬರಡಾಗಿರುವುದನ್ನು

ನೀವು ನೋಡುತ್ತೀರಿ. ನಂತರ ನಾವು ಅದರ ಮೇಲೆ (ಮಳೆ)ನೀರನ್ನು ಸುರಿಸಿದರೆ ಅದಕ್ಕೆ ಪುಳಕವುಂಟಾಗಿ ಅದು ಬೆಳವಣಿಗೆ ಪಡೆಯುತ್ತದೆ ಮತ್ತು ಸುಂದರವಾದ ಸರ್ವ ಸಸ್ಯಗಳನ್ನೂ ಹೊರತರುತ್ತದೆ. ಅದೇಕೆಂದರೆ ಅಲ್ಲಾಹನೇ ಸತ್ಯ, ಅವನು ಸತ್ತವರಿಗೆ ಜೀವ ನೀಡುತ್ತಾನೆ ಮತ್ತು ಅವನಿಗೆ ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವಿದೆ ಎಂಬುದರಿಂದಾಗಿದೆ. ಪ್ರಳಯವು ನಿಶ್ಚಯವಾಗಿಯೂ ಸಂಭವಿಸುತ್ತದೆ. ಅದರಲ್ಲಿ ಸಂದೇಹವೇ ಇಲ್ಲ. ಸಮಾಧಿಗಳಲ್ಲಿರುವವರನ್ನು ಅಲ್ಲಾಹು ಖಂಡಿತ ಜೀವ ನೀಡಿ ಎಬ್ಬಿಸುತ್ತಾನೆ." [ಕುರ್ಆನ್ 22:5-7]

ಮನುಷ್ಯನು ಗರ್ಭಾಶಯದಲ್ಲಿ ಒಂದು ಹಂತದಿಂದ ಮತ್ತೊಂದು ಸಂಪೂರ್ಣ ವಿಭಿನ್ನ ಹಂತಕ್ಕೆ ಸಾಗಿ, ನಂತರ ಒಂದು ಶಿಶುವಾಗಿ ಹುಟ್ಟಿ, ನಂತರ ಜೀವನದ ವಿವಿಧ ಹಂತಗಳನ್ನು ದಾಟಿ ಅಂತಿಮವಾಗಿ ಸಾವು ಎಂಬ ಮಹಾನ್ ಸತ್ಯಕ್ಕೆ ಶರಣಾಗುವ ನಗ್ನ ಸತ್ಯಗಳನ್ನು ಎತ್ತಿ ತೋರಿಸುತ್ತಾ, ಸಾವಿನ ನಂತರ ಮನುಷ್ಯರನ್ನು ಖಂಡಿತ ಜೀವ ನೀಡಿ ಎಬ್ಬಿಸುತ್ತೇನೆ; ಮಳೆಯು ಬರಡು ಭೂಮಿಗೆ ಜೀವವನ್ನು ನೀಡುವಂತೆ ನಾನು ನಿಮ್ಮನ್ನು

ಸಮಾಧಿಗಳಿಂದ ಜೀವಂತಗೊಳಿಸುತ್ತೇನೆ ಎಂದು ಸೃಷ್ಟಿಕರ್ತನು ಹೇಳುತ್ತಾನೆ.

ಸಹೋದರರೇ... ಬೇಡ ಎಂದು ಹೇಳುವ ಯಾವುದೇ ಸಾಮರ್ಥ್ಯ, ಅಧಿಕಾರ ನಮಗಿಲ್ಲ.

ಪರಲೋಕ ಜೀವನ ಖಂಡಿತ ಬರುತ್ತದೆ ಎಂಬ ದೃಢ ನಂಬಿಕೆಯಿರುವುದರಿಂದಲೇ ನಾನು ಇಷ್ಟು ಹೊತ್ತು ನಿಮ್ಮೊಡನೆ ಮಾತನಾಡಿದೆ. “ತಾನು ಬಯಸುವುದನ್ನು ತನ್ನ ಸಹೋದರನಿಗಾಗಿಯೂ ಬಯಸುವವರೆಗೆ ನೀವು ನಿಜವಾದ ಸತ್ಯವಿಶ್ವಾ-ಸಿಗಳಾಗುವುದಿಲ್ಲ” ಎಂದು ಪ್ರವಾದಿ ವಚನವೇ ನನಗೆ ಪ್ರೇರಣೆ. ನಿಮ್ಮ ಮೇಲಿನ ಅತೀವ ಪ್ರೀತಿ ಮತ್ತು ನಿಮ್ಮ ಅಭ್ಯುದಯದ ಆಕಾಂಕ್ಷೆಯೇ ಈ ಸತ್ಯವನ್ನು ನಿಮಗೆ ಹೇಳಲು ನನಗೆ ಉತ್ತೇಜನ ನೀಡಿದೆ.

ಪ್ರತಿಯೊಬ್ಬ ಮುಸಲ್ಮಾನನೂ ಮರಣಾನಂತರದ ಜೀವನದಲ್ಲಿ ಯಶಸ್ವಿಯಾಗಲು ಬಯಸುತ್ತಾನೆ. ಅದಕ್ಕಾಗಿಯೇ ನಾನು ನಿಮಗೆ ಇಸ್ಲಾಮಿನ ಈ ಮಹಾನ್ ಒಳಿತು, ಅದರ ಆದರ್ಶಗಳು ಮತ್ತು ಅದರ ಪ್ರವಾದಿಯನ್ನು ಪರಿಚಯಿಸುತ್ತಿದ್ದೇನೆ.

ಧರ್ಮದಲ್ಲಿ ಬಲವಂತವಿಲ್ಲ. ಅಧ್ಯಯನ, ಚಿಂತನೆ

ಮತ್ತು ಸಮರ್ಪಣೆ ಮಾತ್ರ...

ಈ ಮಾತುಗಳು ನಿಮಗೆ ಪ್ರಯೋಜನವಾದರೆ ನನ್ನ ಕೆಲಸ ಸಾರ್ಥಕ. ನೀವು ಅದನ್ನು ನಿರಾಕರಿಸಿದರೂ, ಅದನ್ನು ನಿಮಗೆ ತಲುಪಿಸಿದ್ದೇನೆಂಬ ಬಗ್ಗೆ ನನಗೆ ನೆಮ್ಮದಿಯಿದೆ.

ಇಷ್ಟರ ತನಕ ನನ್ನ ಮಾತುಗಳನ್ನು ಕೇಳಿದ್ದಕ್ಕೆ ಮತ್ತು ಓದಿದ್ದಕ್ಕೆ ಧನ್ಯವಾದಗಳು.

ಮುಕ್ತ ಮತ್ತು ನಿಷ್ಪಕ್ಷ ಅಧ್ಯಯನಕ್ಕೆ ನಿಮ್ಮನ್ನು ಆಹ್ವಾನಿಸುತ್ತಾ ಕೊನೆಗೊಳಿಸುತ್ತೇನೆ.

ದೇವನು ನಮ್ಮೆಲ್ಲರನ್ನೂ ಅನುಗ್ರಹಿಸಲಿ....

ವಿಷಯಸೂಚಿ




ಮುಖಪುಟಕ್ಕೆ ಮರಳಲು
ಇಲ್ಲಿ ಸ್ಪರ್ಶಿಸಿ